

ಸಂಗೀತ ಸಾಮ್ರಾಟ್

# ಮಲ್ಲಿಕಾರ್ಜುನ ಮನ್ಸೂರ

ಲೇಖಕರು : ಬಿ.ಎಸ್.ವೆಂಕಟಲಕ್ಷ್ಮಿ

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ

# ಸಂಗೀತ ಸಾಮ್ರಾಟ್

# ಮಲ್ಲಿಕಾರ್ಜುನ ಮನಸೂರ

ಲೇಖಕಿ

ಬಿ. ಎಸ್. ವೆಂಕಟಲಕ್ಷ್ಮಿ



ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 560 002

**SANGEETA SAAMRAAT MALLIKARJUNA MANSOOR :** A Biographical Sketch of a distinguished Hindustani Vocalist by Smt. B.S. Venkatalakshmi, Bangalore.
Published by ***Balawant Rao Patil,*** Registrar, Karnataka Sangeeta Nritya Academy, Kannada Bhavana, J.C. Road, Bangalore-560 002

This Edition Rights: Karnataka Sangeeta Nritya Academy,

| | | | |
|---|---|---|---|
| First Edition | : 1996 | Copies | : 1000 |
| Second Edition | : 2010 | Pages | : viii+52=60 |
| Price | : ₹ 30/- | | |

| | | | |
|---|---|---|---|
| ಪ್ರಥಮ ಮುದ್ರಣ | : ೧೯೯೬ | ಪ್ರತಿಗಳು | : ೧೦೦೦ |
| ದ್ವಿತೀಯ ಮುದ್ರಣ | : ೨೦೧೦ | ಪುಟಗಳು | : viii+೫೨=೬೦ |
| ಬೆಲೆ | : ₹ ೩೦/- | | |

ಮುಖಪುಟ ವಿನ್ಯಾಸ : ಚಂದ್ರಕಾಂತ ಪಟ್ಟಣ

ಪ್ರಕಾಶಕರು
ಶ್ರೀ ಬಲವಂತರಾವ್ ಪಾಟೀಲ
ರಿಜಿಸ್ಟ್ರಾರ್, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು-೫೬೦-೦೦೨

ಮುದ್ರಕರು :
ಸತ್ಯಶ್ರೀ ಪ್ರಿಂಟರ್ಸ್ ಪ್ರೈ. ಲಿ.
ನಂ. ೧೬/೧, ೨ನೇ ಮೇನ್, ೩ನೇ ಕ್ರಾಸ್,
ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು-೫೬೦ ೦೨೬
ದೂರವಾಣಿ: ೨೬೭೪೮೮೧೧, / ಸಂಚಾರಿ : ೯೩೪೨೮೬೪೭೬೧
ಇಮೇಲ್ : satyasriprn@rediffmail.com

# ಹಿಂದಿನ ಅಧ್ಯಕ್ಷರ ನುಡಿ
## (ಪ್ರಥಮ ಮುದ್ರಣ)

ಕರ್ನಾಟಕ ಸಂಗೀತ – ನೃತ್ಯ ಅಕಾಡೆಮಿ ಈಗಾಗಲೇ ನಾಡಿನ ಹೆಮ್ಮೆಯ ಕೆಲವು ಕಲಾವಿದರ ಬಗ್ಗೆ ಕಿರುಹೊತ್ತಿಗೆಗಳನ್ನು ಬಿಡುಗಡೆ ಮಾಡಿದೆ. ನಮ್ಮ ನಾಳಿನ ಕಲಾವಿದರು ಈ ಪುಸ್ತಕಗಳನ್ನು ಓದಿ ಅದರಿಂದ ಸ್ಫೂರ್ತಿ ಪಡೆದು ಕಲಾರಂಗದಲ್ಲಿ ಮುಂದುವರಿಯಲಿ ಎಂಬುದೇ ಈ ಪ್ರಕಟಣೆಗಳ ಮೂಲ ಉದ್ದೇಶ.

ಖ್ಯಾತ ನೃತ್ಯಕಲಾವಿದೆ ಪದ್ಮಭೂಷಣ ಡಾ॥ ಕೆ ವೆಂಕಟಲಕ್ಷಮ್ಮ, ಗಮಕವಾಚನ ಪ್ರವೀಣ ಸಂ. ಗೋ. ಬಿಂದುರಾಯರು, ಹರಿಕಥೆ ವಿದ್ವಾಂಸ ಬೆಂಗಳೂರು ಕೃಷ್ಣಭಾಗವತರು, ಸಂಗೀತದ ದಿಗ್ಗಜ ಸವಾಯಿ ಗಂಧರ್ವ, ಹಾಗೂ ಉಭಯ ಗಾನವಿಶಾರದ ಪಂಡಿತ ಪುಟ್ಟರಾಜ ಗವಾಯಿಗಳನ್ನು ಕುರಿತ ಕಿರುಪುಸ್ತಕಗಳು ಈಗಾಗಲೇ ಹೊರಬಂದಿದೆ.

ಈ ಪುಸ್ತಕ ಮಾಲಿಕೆಗೆ ಇಂದು ಸೇರುತ್ತಿರುವ ಮತ್ತೊಂದು ಗಮನಾರ್ಹ ಪ್ರಕಟಣೆ – ಸಂಗೀತ ಸಾಮ್ರಾಟ್ ಮಲ್ಲಿಕಾರ್ಜುನ ಮನಸೂರ.

ಈ ಗಣ್ಯ ಕಲಾವಿದರ ಬಗ್ಗೆ ಬಹಳ ಸೂಕ್ಷ್ಮ ದೃಷ್ಟಿಯಿಂದ ಈ ಪುಸ್ತಕ ಬರೆದುಕೊಟ್ಟಿರುವ ಲೇಖಕಿ ಶ್ರೀಮತಿ ಬಿ. ಎಸ್. ವೆಂಕಟಲಕ್ಷ್ಮಿ ಅವರಿಗೆ ನಮ್ಮ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇವೆ. ಲೇಖಕರು ಬರೆದಿರುವ ಮನಸೂರರ ವ್ಯಕ್ತಿಪರಿಚಯ ಓದುಗರ ಮನವನ್ನು ಸೂರೆಗೊಳ್ಳುವುದರಲ್ಲಿ ಸಂಶಯವಿಲ್ಲ. ಅಷ್ಟು ಅಮೋಘವಾದ ರೀತಿಯಲ್ಲಿ, ಸ್ವಾರಸ್ಯಕರವಾಗಿ ಬರೆದುಕೊಟ್ಟಿದ್ದಾರೆ. ಮಲ್ಲಿಕಾರ್ಜುನರ ಜೀವನದ ಬಾಲ್ಯದಿಂದ ಆರಂಭಿಸಿ ಕೆಲಸದ ಮಧ್ಯೆ ತಾಯಿ ಹಾಡಿದ ಹಾಡುಗಳಿಗೆ ಆಕರ್ಷಿತರಾಗಿ ಅವರು ಸಂಗೀತದ ಮೇರು ಶಿಖರವನ್ನು ತಲುಪಿದ ಎಲ್ಲ ಹಂತಗಳನ್ನು ಹೃದಯಂಗಮವಾಗಿ ನಿರೂಪಿಸಿದ್ದಾರೆ. ಮನಸೂರರ ಹಿಂದೂಸ್ತಾನಿ ಸಂಗೀತದ ಶಾಸ್ತ್ರೀಯತೆಯು ಖಚಿತತೆಯುನ್ನು ಕೂಲಂಕುಶವಾಗಿ ತಿಳಿಸಿ ಅವರ ಸಂಗೀತದ ವಿಶಿಷ್ಟ ವೈಖರಿಯನ್ನು ವರ್ಣಿಸಿದ್ದಾರೆ.

ಓರ್ವ ಪ್ರತಿಭಾವಂತ ವ್ಯಕ್ತಿ ಸಾಮಾನ್ಯ ಕುಟುಂಬದಲ್ಲಿ ಹುಟ್ಟಿ ಹೇಗೆ – ಯಾವ ರೀತಿಯಲ್ಲಿ ಸಂಗೀತ ಕ್ಷೇತ್ರದಲ್ಲಿ ಅಮೂಲ್ಯ ನಿಧಿ ಆಗಬಲ್ಲನು ಎಂಬ ದೈವ ಸಂಕಲ್ಪವನ್ನು ಆಕೆ ಮನವೊಪ್ಪುವಂತೆ ವಿವರಿಸಿದ್ದಾರೆ.

ಮಲ್ಲಿಕಾರ್ಜುನರ ಸ್ನೇಹಸ್ವಾಭಾವ – ಸೃಜನಶೀಲತೆ – ಸಂಗೀತಕ್ಕೆ ಇತ್ತ ಆತ್ಮಾರ್ಪಣೆ – ಅದರಿಂದಾಗಿ ಸಿಕ್ಕ ಫಲಿತಾಂಶ ಎಲ್ಲವನ್ನು ಈ ಕಿರುಹೊತ್ತಿಗೆಯಲ್ಲಿ ಓದಿ ಆನಂದಪಡಬಹುದು.

ಅಂದಿನ ದಿನಗಳಲ್ಲಿ ದೊಡ್ಡ ಕುಟುಂಬದಲ್ಲಿ ಜನಿಸಿ ಬೆಳೆಯಬೇಕಾದುದು ಸಾಮಾನ್ಯವಾಗಿತ್ತು. ಎಂಟು ಮಕ್ಕಳನ್ನು ಹಡೆದ ಮಲ್ಲಿಕಾರ್ಜುನರ ತಾಯಿ ಅವರನ್ನು ಗುರುಗಳ ಮಠಕ್ಕೆ ಕೊಡಲು ಹೋದಾಗ ದುಃಖವನ್ನು ತಡೆಯಲಾರದೆ ಇದ್ದುದು – ಮಠದ ಗುರುಗಳು ಮಗುವನ್ನು ತಮ್ಮ ಶಿಷ್ಯನಾಗಿ ಹೆತ್ತವರ ಮನೆಯಲ್ಲಿಯೇ ಬೆಳೆಸಿ ಎಂಬ ಸಲಹೆ ನೀಡಿದುದು – ಬಹಳ ಹೃದಯಸ್ಪರ್ಶಿ ವಿಷಯವಾಗಿದೆ. ಕಲೆಯನ್ನು ಪ್ರತಿಭಾವಂತರು ಎಂದೂ ಅದುಮಿ ಹಿಡಿಯಲು ಸಾಧ್ಯವಿಲ್ಲ. ಕಲೆಯು ಮನುಷ್ಯನ ಪ್ರವೃತ್ತಿಯನ್ನು ಒತ್ತಿ ಒತ್ತಿ ಹೊರಹೊಮ್ಮಿ ಬರಲು ಪ್ರಯತ್ನಿಸಿದಾಗ ಕಲಾವಿದನು ಪಡುವ ಕಷ್ಟಗಳನ್ನು ಹೇಳಿತೀರದು. ಆದರೂ ಮಲ್ಲಿಕಾರ್ಜುನರಿಗೆ ದೈವಿಕ ಶಕ್ತಿಯೊಂದು ಮಾನವರೂಪಗಳಲ್ಲಿ ಆಸರೆಗೆ ಬಂದು ಆಗಿಂದಾಗ್ಗೆ ಅವರನ್ನು ಕಲಾಪಥದಲ್ಲಿ ಸಾಗಿಸಿಕೊಂಡುಬಂದುದು ಕುತೂಹಲಕಾರಿ.

ಆ ದಿನಗಳಲ್ಲಿ ನಾಟಕಗಳಲ್ಲಿ ಸಂಗೀತ ಇದ್ದುದರಿಂದ ಉದಯೋನ್ಮುಖ ಕಲಾವಿದರಿಗೆ ರಂಗಭೂಮಿಯ ಆಕರ್ಷಣೆ ಇದ್ದುದು ಸಹಜ. ಅಲ್ಲದೆ ಅಲ್ಲಿ ಸೇರಿ ಸಂಗೀತವನ್ನು ಕಾಪಾಡಿಕೊಂಡು ಬರುತ್ತಿದ್ದುದು ಯಶಸ್ಸಿನ ಒಂದು ಮುಖ್ಯವಾದ ಮೆಟ್ಟಲು ಆಗಿತ್ತು.

ಸಮಾಜದ ನಿಷ್ಠುರ – ಬಂಧುಗಳ ಆತಂಕ ಇದ್ದರೂ ಸಂಗೀತಗಾರರು ಅದನ್ನು ಎದುರಿಸಿ ರಂಗಭೂಮಿಯಲ್ಲಿ ಮೆರೆಯುತ್ತಿದ್ದುದು ಸಂಗೀತಕ್ಕೆ ಜನಸಮೂಹ ಕೊಡುತ್ತಿದ್ದ ಉತ್ತೇಜನ – ಪ್ರೋತ್ಸಾಹದ ಕಾರಣದಿಂದ.

ರಂಗಭೂಮಿಯನ್ನು ಬಿಟ್ಟು ಗುರುಗಳ ಮನೆಗಳಲ್ಲಿ ಗುರುಕುಲ ವಾಸವಾಗಿ ಮನೆಗೆಲಸಗಳನ್ನು ಇತರ ಸೇವೆಯನ್ನು ವರುಷಗಟ್ಟಳೆ ಮಾಡಿ ಯಾವ ಆರ್ಥಿಕ ನೆರವೂ ಇಲ್ಲದೆ, ಇಂತಿಷ್ಟು – ಒಂದಿಷ್ಟು ಸಂಗೀತವನ್ನು ಕಲಿತುಕೊಳ್ಳಬೇಕಾದ ಪರಿಸ್ಥಿತಿಯನ್ನು ನಾನು ಪರಿಗಣಿಸಿದರೆ – ಇಂದಿಗೂ ಅಂದಿಗೂ ಇದ್ದ ಗುರುಶಿಷ್ಯಪರಂಪರೆ – ಗುರುಕುಲವಾಸ – ಸಂಗೀತ ಶಿಕ್ಷಣದ ಕ್ರಮ ಎಷ್ಟು ಬದಲಾಗಿದೆ ಎಂದು ವಿಸ್ಮಯಪಡುವಂತಾಗಿದೆ. ಗುರುಗಳು ಕೊಡುತ್ತಿದ್ದ ಮಧ್ಯರಾತ್ರಿಯ ಪಾಠಗಳು – ಬೆಳಿಗ್ಗೆ 4 ಗಂಟೆಯಿಂದ ಆರಂಭವಾದ ಅಭ್ಯಾಸಗಳು – ದಿನವಿಡೀ ಸಂಗೀತಸಾಧನೆ – ಇವೆಲ್ಲ ನಮಗೆ ಊಹೆಗೂ ಮೀರಿದ ವಿಷಯವಾಗಿವೆ.

ಅಂತೂ ಮಲ್ಲಿಕಾರ್ಜುನ ಮನಸೂರರು ಸಂಗೀತಕ್ಕಾಗಿ ಹುಟ್ಟಿದರು – ಸಂಗೀತಕ್ಕಾಗಿ ಬೆಳೆದು ಅದಕ್ಕಾಗಿ ತಮ್ಮನ್ನು ತಾವೇ ಅರ್ಪಿಸಿಕೊಂಡರು. ನಿಸ್ವಾರ್ಥತೆಯಿಂದ – ಸ್ವಾಭಿಮಾನದಿಂದ ಸಂಗೀತ ಕಲೆಯನ್ನು ಸಾಧಿಸಿ ಬಿರುದು – ಬಾವಲಿಗಳನ್ನು ಪಡೆದು ಒಂದು ಅತ್ಯುನ್ನತ ಶಿಖರವನ್ನೇರಿದರು. ಕರ್ನಾಟಕಕ್ಕೆ ಕೀರ್ತಿ ತಂದರು. ಅವರ ಜೀವನವನ್ನು ಓದುವುದೇ ಕನ್ನಡಿಗರಿಗೆ – ಸಂಗೀತಗಾರರಿಗೆ ಸ್ಫೂರ್ತಿದಾಯಕವಾಗಿದೆ. ಕಷ್ಟ – ನಷ್ಟ – ಎಲ್ಲವೂ ಸಂಗೀತದ ಮುಂದೆ ಅಲ್ಪ ಎಂಬುದನ್ನು ಅವರು ನಮಗೆ ತಿಳಿಸಿದ್ದಾರೆ. ಆ ಪಾಠ ನಮಗಿರಲಿ.

**ಚಂದ್ರಭಾಗಾದೇವಿ**

# ಅಧ್ಯಕ್ಷರ ಮಾತು
## (ಮರು ಮುದ್ರಣ)

ಪಂಡಿತ್ ಮಲ್ಲಿಕಾರ್ಜುನ ಮನ್ಸೂರರ ಬಗ್ಗೆ ಶ್ರೀಮತಿ ಬಿ.ಎಸ್. ವೆಂಕಟಲಕ್ಷ್ಮಿ ಅವರು ಬರೆದಿರುವ ಅತ್ಯುತ್ತಮ ಪುಸ್ತಕ ಮರುಮುದ್ರಣ ವಾಗುತ್ತಿರುವುದು ಎಲ್ಲ ಸಂಗೀತಾಭಿಮಾನಿಗಳಿಗೆ ಸಂತೋಷವನ್ನು ತರುತ್ತದೆ ಎಂದು ನನಗೆ ಗೊತ್ತು. ಈ ಮರುಮುದ್ರಣ ನಮ್ಮ ಅವಧಿಯಲ್ಲಿ ಆಗುತ್ತಿದೆ ಅನ್ನುವುದು ನಮಗೆ ಹೆಮ್ಮೆಯ ಪಿಷಯ.

ನಮ್ಮ ಕರ್ನಾಟಕ ಸಂಗೀತ ಮಾಧ್ಯದಲ್ಲಿ ಆಗಿಹೋದವರು ಹಲವರು. ಹೋದವರು ತಮ್ಮ ಸಾಧನೆಗಳನ್ನು ಉಳಿಸಿ ಹೋದರು-ಆ ಮೂಲಕ ತಾವೂ ಚಿರಂಜೀವಿಗಳಾಗಿ ಉಳಿದುಕೊಂಡರು ಎನ್ನುವುದನ್ನು ನಾವು ಗಮನಿಸಬೇಕು. ಅಂತಹ ಸಾಧಕರ ಸಾಧನೆಗಳನ್ನು ಪೀಳಿಗೆಯಿಂದ ಪೀಳಿಗೆಗೆ ತಲುಪಿಸುವ ಹೊಣೆಗಾರಿಕೆ ನಮ್ಮ ಅಕಾಡೆಮಿಗೆ ಇದೆ. ನಾನು ಗಮನಿಸಿದ ಹಾಗೆ ನಮ್ಮ ಅಕಾಡೆಮಿಯ ಎಲ್ಲ ಅವಧಿಗಳಲ್ಲೂ ಈ ಕೆಲಸ ಸಮರ್ಥವಾಗಿ ಆಗಿದೆ. ಅದನ್ನು ಮತ್ತಷ್ಟು ವಿಸ್ತೃತ ರೂಪದಲ್ಲಿ ಕಾರ್ಯರೂಪಕ್ಕೆ ತರಬೇಕೆಂಬ ನಮ್ಮ ಅಭಿಲಾಷೆ ಈಡೇರಿದೆ ಎನ್ನುವ ಸಂತೃಪ್ತ ಭಾವ ನನ್ನದು.


ಈ ಪುಸ್ತಕದಲ್ಲಿ ಲೇಖಕಿ ಮನ್ಸೂರರ ಬಗೆಗಿನ ಸಂಪೂರ್ಣ ಚಿತ್ರಣವನ್ನು ಸರಳ ಹಾಗೂ ಆತ್ಮೀಯ ಭಾವದಲ್ಲಿ ಕಟ್ಟಿಟ್ಟಿದ್ದಾರೆ. ಓದುತ್ತಾ ಹೋದಂತೆ ಆ ಸಾಧಕನ ಚಿತ್ರಣ ಮನಸ್ಸಿನ ಮುಂದೆ ಹಾದು ಬಂದಂತಹ ಅನುಭವವಾಗುತ್ತದೆ. ಜನನ, ಬಾಲ್ಯ, ವಿದ್ಯಾಭ್ಯಾಸ, ರಂಗಭೂಮಿ, ಸಾಹಿತ್ಯ,

ಸಂಗೀತ ಪರಿಚಯ, ಗುರುಗಳ ಹುಡುಕಾಟ, ಸಾಧನೆಯ ಹಾದಿ - ಇವೆಲ್ಲವುಗಳ ಜೊತೆಗೆ ಬದುಕು, ಸಂಬಂಧಗಳು, ವಿಯೋಗಗಳ ತಾಕಲಾಟ, ವಿಧಿಯೊಂದಿಗಿನ ಗುದ್ದಾಟದ ಸಂದರ್ಭಗಳು, ಬದುಕಿನ ಕೆಲವು ಕೊಂಡಿಗಳು ಕಳಚಿಕೊಂಡಾಗ ತಳೆಯುವ ಸ್ಥಿತಪ್ರಜ್ಞತೆ, ಅದಕ್ಕಾಗಿ ಸಂಗೀತವನ್ನು ಮೆಟ್ಟಿಲಾಗಿಸಿಕೊಂಡದ್ದು - ಇವೆಲ್ಲವುಗಳನ್ನು ಹೃದಯಂಗಮವಾಗಿ ಚಿತ್ರಿಸಲಾಗಿದೆ.

ಈ ಪುಸ್ತಕವನ್ನು ಓದುವುದರ ಮೂಲಕ ಪಂಡಿತ ಮಲ್ಲಿಕಾರ್ಜುನ ಮನ್ಸೂರರ ವ್ಯಕ್ತಿತ್ವ, ಸಾಧನೆ, ಪಾಂಡಿತ್ಯ ಇವೆಲ್ಲವುಗಳ ಸಂಪೂರ್ಣ ಪರಿಚಯ ಓದುಗರಿಗೆ ದೊರೆಯುತ್ತದೆ ಎನ್ನುವ ಸಂಪೂರ್ಣ ನಂಬಿಕೆ ನನಗಿದೆ. ಈ ಮರುಮುದ್ರಣ ಕೆಲಸ ಕಾರ್ಯರೂಪಕ್ಕೆ ಬರುವಲ್ಲಿ ಶ್ರದ್ಧೆಯಿಂದ ಶ್ರಮಿಸಿದ ಎಲ್ಲರಿಗೆ ನನ್ನ ಹೃದಯಪೂರ್ವಕ ಅಭಿನಂದನೆಗಳು.

**ಪಂಡಿತ್ ಡಾ. ನರಸಿಂಹಲು ವಡವಾಟಿ**

ಅಧ್ಯಕ್ಷರು



ಸಂಗೀತ ಸಾಮ್ರಾಟ್ ಮಲ್ಲಿಕಾರ್ಜುನ ಮನ್ಸೂರ್

### ಸಂಗೀತ್ ಸಾಮ್ರಾಟ್

# ಮಲ್ಲಿಕಾರ್ಜುನ ಮನಸೂರ

ಮಹಾನ್ ಸಂಗೀತ ಕಲಾವಿದ ಮಲ್ಲಿಕಾರ್ಜುನ ಮನಸೂರ. ಕರ್ನಾಟಕದ ಧಾರವಾಡ ಜಿಲ್ಲೆಯ ಪುಟ್ಟಹಳ್ಳಿಯೊಂದರಲ್ಲಿ ಜನಿಸಿದ ಇವರು ತಮ್ಮ ನಾದಮಯ ಬದುಕಿನಿಂದಾಗಿ, ಮನಸೂರೆಗೊಳಿಸುವ ಗಾಯನದಿಂದಾಗಿ ಪ್ರಸಿದ್ಧವಾದದ್ದು ಭಾರತದ ಎಲ್ಲೆಡೆಗಳಲ್ಲಿ. ಏರಿದ್ದು ಪ್ರತಿಭೆಯ ಮೇರು ಶಿಖರಗಳನ್ನು, ಸುಮಾರು ಐದು ದಶಕಗಳಕಾಲ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಆಯಾಮದಲ್ಲಿ ಮುಂಚೂಣಿಯಲ್ಲೇ ನಿಂತು ತಮ್ಮ ಗಂಧರ್ವಗಾನದಿಂದ ಸಹಸ್ರಾರು ಸಂಗೀತಾಭಿಮಾನಿಗಳನ್ನು ಭಾವ ಪರವಶರನ್ನಾಗಿಸುತ್ತಿದ್ದ ಮಲ್ಲಿಕಾರ್ಜುನ ಮನಸೂರರು ಕನ್ನಡ ನಾಡನ್ನು ಸಿರಿವಂತಿಕೆಯತ್ತ, ಭವ್ಯತೆಯತ್ತ ಕೊಂಡೊಯ್ದ ಅಪರೂಪದ ವ್ಯಕ್ತಿ. ಕನ್ನಡಿಗರನ್ನು ಧನ್ಯರನ್ನಾಗಿಸಿದ, ಅವರಿಗೆ ಅಭಿಮಾನವನ್ನು ತಂದಿತ್ತ ಅಭಿಜಾತ ಗಾನಯೋಗಿ.

ಮಲ್ಲಿಕಾರ್ಜುನ ಮನಸೂರರನ್ನು ಕಲಾವಿದರಾಗಿ, ವ್ಯಕ್ತಿಯಾಗಿ ಗುರುತಿಸ ಹೊರಟಾಗ ಕಣ್ಸೆಳೆಯುವುದು ಅವರಿಗಿದ್ದ ಶ್ರೋತೃವೃಂದ, ಅವರಿಗೆ ದೊರೆತಿದ್ದ ಪ್ರಶಸ್ತಿ – ಪಾರಿತೋಷಕಗಳು, ಬಿರುದು ಸನ್ಮಾನಗಳು. ಆದರೆ ಸಾಧನೆಯ ಹಾದಿಯನ್ನು ಛಲದಿಂದ ಹಿಡಿದು, ತಮ್ಮ ಧ್ಯೇಯ ಸಾಕ್ಷಾತ್ಕಾರವಾಗುವವರೆಗೂ ಕಠಿಣವಾದ ದಾರಿಯನ್ನು ಕ್ರಮಿಸಿ, ಸಂಕಷ್ಟಗಳು ಎದುರಾದಾಗಲೂ ದೃತಿಗೆಡದೆ ಮುನ್ನಡೆಯುವ ಮಿಕ್ಕೆಲ್ಲ ಸಾಧಕರ ಬದುಕಿನಂತೆಯೇ ಮಲ್ಲಿಕಾರ್ಜುನ ಮನಸೂರರ ಜೀವನವೂ. ಸಾಮಾನ್ಯ ಕುಟುಂಬವೊಂದರಲ್ಲಿ ಜನಿಸಿ, ಸಣ್ಣ ವಯಸ್ಸಿನಲ್ಲೇ ತಮ್ಮ ನೆಲೆ ಯಾವುದು ಎಂಬುದನ್ನು ತಾವೇ ಗುರುತಿಸಿಕೊಂಡು ಸ್ವಾಭಿಮಾನವನ್ನು ಎಂದೂ

ಬಿಟ್ಟುಕೊಡದೆ ಗುರಿ ಸಾಧನೆ ಮಾಡಿದ ಮಲ್ಲಿಕಾರ್ಜುನ ಮನಸೂರರು ಸಿದ್ಧಪುರುಷರಂತೆ; ಅವರ ಬಾಳ್ವೆಯ ವಿವಿಧ ಘಟ್ಟಗಳು ರೋಚಕವಾದ ಕಥೆಯೊಂದರಂತೆ.

## ಹುಟ್ಟಿನಿಂದಲೇ ಸಂಗೀತಕ್ಕೆ ಕಿವಿದೆರೆದ ಮನಸೂರ



ಧಾರವಾಡ ನಗರದಿಂದ ಎರಡು ಮೈಲಿ ದೂರವಿರುವ ಮನಸೂರ ಎಂಬ ಹಳ್ಳಿಯಲ್ಲಿ ಡಿಸೆಂಬರ್ 31, 1910ರಂದು, ಅಮಾವ್ಯಾಸೆಯ ದಿನ ಮೂಲಾ ನಕ್ಷತ್ರದಲ್ಲಿ ಮಲ್ಲಿಕಾರ್ಜುನ ಮನಸೂರರ ಜನನವಾದಾಗ ಅವರ ತಂದೆ ಭೀಮರಾಯಪ್ಪ ಹಾಗೂ ತಾಯಿ ನೀಲಮ್ಮನವರಿಗೆ ತಮಗೆ ಹುಟ್ಟಿದ ಮಗ ಮುಂದೊಮ್ಮೆ ವಿಖ್ಯಾತವ್ಯಕ್ತಿಯಾಗುತ್ತಾನೆಂಬ ಕಲ್ಪನೆಯೂ ಪ್ರಾಯಶಃ ಇದ್ದಿರಲಿಲ್ಲ. ಹಾಗೆ ನೋಡಿದರೆ ಹುಟ್ಟುತ್ತಿದ್ದ ಹಾಗೇ ಮಲ್ಲಿಕಾರ್ಜುನರಿಗೆ ಮನೆಯಲ್ಲಿ ಅಪಶ್ರುತಿಯೇ ಎದುರಾಗಿತ್ತು. ಮೂಲಾ ನಕ್ಷತ್ರದ ಈ ಹುಡುಗ ಅಶುಭ ತರುತ್ತಾನೆಂದು ಭೀತಿಗೊಂಡ ಹಿರಿಯರು ಮಗುವನ್ನು ಅಲಕ್ಷಿಸಿ ಅದನ್ನು ಮಠಕ್ಕೆ ಕೊಟ್ಟುಬಿಡಲೆಂದು ಸ್ವಾಮಿಗಳೊಬ್ಬರ ಬಳಿಗೆ ಕೊಂಡೊಯ್ದರು. ಕೂಸಿನ ಜತೆಯಲ್ಲೇ ಹೊರಟ ನೀಲಮ್ಮ ಮಗುವನ್ನು ಬಿಟ್ಟಿರಲಾರದೆ ದುಃಖದಿಂದ ಕುಸಿದಾಗ ನೊಂದ ಸ್ವಾಮಿಗಳು “ಮಗುವನ್ನು ನಮ್ಮ ಶಿಷ್ಯನಾಗಿ ನಿಮ್ಮ ಮನೆಯಲ್ಲೇ ಬೆಳೆಸಿ” ಎಂದು ಆಕೆಗೆ ಸಮಾಧಾನ ಮಾಡಿ ಕಳಿಸಿಕೊಟ್ಟರು. ಸ್ವಾಮಿಗಳ ಹಿತವಚನದಿಂದಾಗಿ ಮಠದ ಪಾಲಾಗಬೇಕಾಗಿದ್ದ ಮಲ್ಲಿಕಾರ್ಜುನರು ಮನೆಯಲ್ಲೇ ಉಳಿದುಕೊಂಡರು.

ಮಲ್ಲಿಕಾರ್ಜುನ ಮನಸೂರರ ತಂದೆ ಭೀಮರಾಯಪ್ಪ ಆ ಸ್ಥಳದ ಗೌಡರು. ಅವರ ಪೂರ್ವಿಕರು ಬೆಳಗಾವಿ ಜಿಲ್ಲೆಯ ಪಾಚ್ಛಾಪುರದಿಂದ ಮನಸೂರಿಗೆ ಸುಮಾರು ಒಂದೂವರೆ ಶತಮಾನದ ಹಿಂದೆಯೇ ವಲಸೆ ಬಂದಿದ್ದು, ಕೃಷಿಕಾರರಾಗಿ ದುಡಿಯುತ್ತ ತಾವು ಬೆಳೆದಿದ್ದ ಬಹುಪಾಲನ್ನು ಇನಾಮದಾರರಿಗೆ ಒಪ್ಪಿಸುತ್ತ ಶ್ರೀಮಂತಿಕೆಯನ್ನು ಕಾಣದಿದ್ದರೂ ಇದ್ದುದರಲ್ಲೇ ತೃಪ್ತಿಯನ್ನು ಕಂಡುಕೊಂಡಿದ್ದರು. ಸಣ್ಣದೊಂದು ಓಣಿಯಲ್ಲಿದ್ದ ಮನೆಯನ್ನು ಮಲ್ಲಿಕಾರ್ಜುನರ ನಾಲ್ವರು ಅಜ್ಜಂದಿರು ನಾಲ್ಕು ಭಾಗಗಳಾಗಿ ಹಂಚಿಕೊಂಡು ಬದುಕನ್ನು ಸಾಗಿಸಿದ್ದರು. ಭೀಮರಾಯಪ್ಪನವರದ್ದು ದೊಡ್ಡ ಕುಟುಂಬ. ಮಲ್ಲಿಕಾರ್ಜುನರಲ್ಲದೆ ಅವರಿಗೆ ಬಸವರಾಜ, ಪಾರ್ವತಮ್ಮ, ಕಲ್ಲಪ್ಪ, ಲಿಂಗಮ್ಮ, ನಾಗಮ್ಮ, ಶಂಕರಪ್ಪ, ಶಕುಂತಲಾ, ಹೀಗೆ ಮಕ್ಕಳು. ಮಲ್ಲಿಕಾರ್ಜುನರಿಗೆ ಅವರ ಮೂರನೇ ಅಜ್ಜನ ಹೆಸರನ್ನಿಟ್ಟ ಭೀಮರಾಯಪ್ಪನವರು ಮಗ ಸರ್ಕಾರದ ಅಧಿಕಾರಿಯಾಗಬೇಕು ಎಂಬ ಹಂಬಲವನ್ನು ಅವರು ಹುಟ್ಟಿದಾಗಿನಿಂದಲೇ ಬೆಳಿಸಿಕೊಂಡಿದ್ದರು. ಅವರು ಶಾಲೆಗೆ ಸೇರುವ ವಯಸ್ಸಿಗೆ ಬರುತ್ತಿದ್ದಂತೆಯೇ ಹಳ್ಳಿಯ ಗಾಂವಟಿ ಸ್ಕೂಲಿಗೆ ಸೇರಿಸಿದರು.

ಸಣ್ಣ ಬಾಲಕನಾಗಿದ್ದಾಗಲೇ ಮಲ್ಲಿಕಾರ್ಜುನರದು ಸಂಗೀತದತ್ತ ಒಲಿದಿದ್ದ ಮನಸ್ಸು. ತಾಯಿ ನೀಲಮ್ಮ ಮನೆಗೆಲಸಗಳ ಜಂಜಾಟದ ಮಧ್ಯೆಯೂ ಹಿಟ್ಟು ಬೀಸುವಾಗ, ಧಾನ್ಯ ಕುಟ್ಟುವಾಗ ಹಾಡಿಕೊಳ್ಳುತ್ತಿದ್ದ ಪದಗಳು ಆಕೆಯನ್ನೇ ಮುಗ್ಧತೆಯಿಂದ ದಿಟ್ಟಿಸುತ್ತ ಕೂಡುತ್ತಿದ್ದ ಮಲ್ಲಿಕಾರ್ಜುನರಲ್ಲಿ ಅಪರಿಮಿತ ಸಂತಸವನ್ನು ಉಂಟುಮಾಡುತ್ತಿತ್ತು. ತಾಯಿಯ ಜೋಗುಳ ಅವರನ್ನು ಕನಸಿನ ಲೋಕಕ್ಕೆ ಒಯ್ಯುತ್ತಿತ್ತು. ಇಷ್ಟು ಸಾಲದೆಂಬಂತೆ ಸಂಗೀತದ ಬಗ್ಗೆ ಅಸ್ಥೆಯಿದ್ದ ಭೀಮರಾಯಪ್ಪ ಮನೆಯಲ್ಲೇ ಅಪ್ಪಯ್ಯ ಎಂಬ ಸಂಗೀತಗಾರರಿಗೆ ಆಶ್ರಯಕೊಟ್ಟು ಅವರಿಂದ ಹಾಡಿಸಿ ನಲಿಯುತ್ತಿದ್ದರು. ಮಗ ಬಸವರಾಜರಿಗೆ ಅವರಿಂದ ಕರ್ನಾಟಕ ಸಂಗೀತ ಪಾಠ ಹೇಳಿಸುತ್ತಿದ್ದರು. ಬಸವರಾಜರೇನೋ ಸಂಗೀತವನ್ನು ಕಲಿಯುವಲ್ಲಿ ತೋರಿದ ಶ್ರದ್ಧೆಯನ್ನೇ ಪಾಠ ಪ್ರವಚನದಲ್ಲೂ ತೋರಿಸಿದರು. ಆದರೆ ಮಲ್ಲಿಕಾರ್ಜುನರ ಮನಸ್ಸು

ಮಾತ್ರ ಶಾಲೆಯ ಕಡೆ ಮೊಗ ಮಾಡದೆ ಸಂಗೀತದತ್ತಲೇ ವಾಲತೊಡಗಿತು. ಮನೆಯವರ್ಯಾರೂ ಆಗ ಅವರ ಅಭಿರುಚಿಯನ್ನು ಗುರುತಿಸುವ ಮಟ್ಟಿಗೆ ಅದು ಪ್ರಧಾನವಾಗಿ ಕಾಣಿಸಿಕೊಳ್ಳದಿದ್ದರೂ, ಮಲ್ಲಿಕಾರ್ಜುನರೇ ಅದರ ಹೊಳಹುಗಳನ್ನು ತಮಗೆ ಅರಿವಿಲ್ಲದೆಯೇ ಮನಸ್ಸಿನಲ್ಲೇ ಊರ್ಜಿತ ಗೊಳಿಸಿಕೊಳ್ಳಲು ತೊಡಗಿದರು. ಭೀಮ ರಾಯಪ್ಪನವರು ಬಸವರಾಜರನ್ನು ಧಾರವಾಡದಲ್ಲಿದ್ದ ಅವರಜ್ಜ ಚನ್ನವೀರಪ್ಪನವರ ಬಳಿಗೆ ವ್ಯಾಸಂಗ ಮುಂದುವರಿಕೆಗಾಗಿ ಕಳಿಸಿದರು. ಅಣ್ಣನನ್ನು ಅಪಾರವಾಗಿ ಪ್ರೀತಿಸುತ್ತಿದ್ದ ಮಲ್ಲಿಕಾರ್ಜುನರು ಅವರು ದೂರವಾದಾಗ ಹತಾಶರಾದರು. ಅತ್ತ ಬಸವರಾಜರೂ ಸುಖವಾಗೇನೂ ಇರಲಿಲ್ಲ. ಸಂತಾನವಿಲ್ಲದೆ ಮಕ್ಕಳಿಗಾಗಿ ಹಂಬಲಿಸುತ್ತ ಹತಾಶೆಯಿಂದಿದ್ದ ಚನ್ನವೀರಪ್ಪನವರು ಬಸವರಾಜರು ತಮ್ಮಲ್ಲಿಗೆ ಬಂದಾಗ ಆತ್ಮೀಯವಾಗಿ ಅವರನ್ನು ಬರಮಾಡಿಕೊಂಡಿದ್ದರೂ ತಮ್ಮ ಮೂರನೆಯ ಮಡದಿಯಿಂದ ಗಂಡುಮಗುವಾದ ಕೂಡಲೇ ಬಸವರಾಜರನ್ನು ಅನಾದರಿಸಲು ತೊಡಗಿದರು. ಒಲ್ಲದ ಮನಸ್ಸಿನಿಂದಲೇ ಅವರನ್ನು ಮನೆಯಲ್ಲಿ ಇರಗೊಡತೊಡಗಿದ್ದರು. ಬಸವರಾಜರಿಗೆ ಚಿಕ್ಕ ವಯಸ್ಸಾದರೂ ಸುತ್ತಮುತ್ತಲಿನ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವಷ್ಟು ತಿಳುವಳಿಕೆಯಿತ್ತು. ಆ ಸಮಯಕ್ಕೆ ಅಲ್ಲಿಗೆ ಬಂದಿದ್ದ ವಾಮನರಾವ್ ಮಾಸ್ತರರ ನಾಟಕ ಕಂಪೆನಿಗೆ ಸೇರಿದರು.

ಭೀಮರಾಯಪ್ಪನವರಿಗೆ ಬಸವರಾಜರ ಈ ವರ್ತನೆ ಆಕಸ್ಮಿಕ, ಮಗನೊಬ್ಬ ನಾಟಕದ ಖಯಾಲಿ ಹತ್ತಿಸಿಕೊಂಡು ಕಂಪೆನಿ ಸೇರಿದ್ದನ್ನು ಕಂಡ ಅವರು ನಂತರ ಮಲ್ಲಿಕಾರ್ಜುನರ ಮೇಲೆ ಹೆಚ್ಚು ಭರವಸೆಯನ್ನು ಇಡತೊಡಗಿದರು. ಅವರನ್ನು ಮುಂದಿನ ಓದಿಗಾಗಿ ಧಾರವಾಡದ ಅಜ್ಜನ ಮನೆಯಲ್ಲಿ ಬಿಟ್ಟಾಗ, ಶಾಲಾ ಶಿಕ್ಷಣದ ಬಗ್ಗೆ ಎಳ್ಳಷ್ಟು ಉತ್ಸುಕರಾಗದೇ ಇದ್ದ ಮಲ್ಲಿಕಾರ್ಜುನರು ಮೂರನೇ ಇಯತ್ತೆಗೇ ಇತಿಶ್ರೀ ಹಾಡಿದರು. ತಾನೂ ಅಣ್ಣನಂತಾಗಬೇಕೆಂದು ಹಂಬಲಿಸಿದರು. ನಾಟಕ ಕಂಪನಿಯ ಬಾಗಿಲು ತಟ್ಟಿದರು. ಅನಿರೀಕ್ಷಿತವಾಗಿ ಆಗಮಿಸಿದ ತಮ್ಮನನ್ನು ಕಂಡು

ಬಸವರಾಜರಿಗೆ ಆಘಾತ. ಅವರನ್ನು ಬೈದರು, ಅಂದರು, ಹಿಂತಿರುಗಿ ಹೋಗೆಂದು ಉಪದೇಶ ಮಾಡಿದರು. ಭೀಮರಾಯಪ್ಪನವರೂ ವಿಷಯ ತಿಳಿದು ಕಂಪೆನಿಯತ್ತ ಧಾವಿಸಿ ಪುಟ್ಟ ಮಲ್ಲಿಕಾರ್ಜುನರನ್ನು ವಾಪಸ್ಸು ಕರೆದೊಯ್ದರು. ಆದರೆ ಮಲ್ಲಿಕಾರ್ಜುನರು ಮನೆಯಲ್ಲಿ ಉಳಿಯಲಿಲ್ಲ. ಮನೆ ಸೇರುತ್ತಿದ್ದಂತೆಯೇ ಮತ್ತೆ ನಾಟಕ ಕಂಪೆನಿಯತ್ತ ಓಡಿ ಬಂದರು. ಅಲ್ಲಿ ಮ್ಯಾನೇಜರಾಗಿದ್ದ ರಾಮಚಂದ್ರಪ್ಪ ಎಂಬುವರ ಕಣ್ಣಿಗೆ ಬಿದ್ದರು. ಕಂಪೆನಿ ಬೆಳಗಾವಿಗೆ ಹೊರಟಾಗ ತಮ್ಮ ಬೆನ್ನಿಗಂಟಿದ್ದ ಮಲ್ಲಿಕಾರ್ಜುನರನ್ನು ಅವರು ಅಥಣಿಯ ಕ್ಯಾಂಪ್‌ಗೆ ಕರೆದೊಯ್ದರು. ಬಾಲಕನಲ್ಲಿದ್ದ ಪ್ರತಿಭೆ ಬಹಳ ಬೇಗನೆ ಅಲ್ಲಿದ್ದವರಿಗೆಲ್ಲ ಗೋಚರಿಸಿತು. ಅಣ್ಣ ಬಸವರಾಜರೊಂದಿಗೆ ತಮ್ಮ ಮಲ್ಲಿಕಾರ್ಜುನರೂ ಪಾರ್ಟ್ ಮಾಡಲು ಪ್ರಾರಂಭಿಸಿದರು. "ಭಕ್ತಪ್ರಹ್ಲಾದ"ದಲ್ಲಿ ಪ್ರಹ್ಲಾದ; "ಕೃಷ್ಣಲೀಲೆ"ಯಲ್ಲಿ ವಿಜಯ; "ಮಹಾನಂದಾ"ದಲ್ಲಿ ನಾರದ; "ಬಾಜೀರಾವ"ದಲ್ಲಿ ಸ್ವರಾಜ್ಯಲಕ್ಷ್ಮಿ; "ವರಪ್ರಧಾನ"ದಲ್ಲಿ ವಿದ್ಯಾರಣ್ಯ. ಅಣ್ಣನ ಅಭಿನಯದೊಂದಿಗೆ ತಮ್ಮನ ಹಾಡಾಗುರಿಕೆ ಮೇಳೈಸಿದಾಗ ತಮಗಾದ ಅವರ್ಣನೀಯ ಆನಂದವನ್ನು ಜನರು ಚಪ್ಪಾಳೆತಟ್ಟಿ ಅಭಿವ್ಯಕ್ತಿಸಿದರು.

ಒಮ್ಮೆ ನಾಟಕ ಕಂಪೆನಿಯ ನಟರೊಂದಿಗೆ ಶಿವಯೋಗಿಗಳ ಮಠಕ್ಕೆ ತೆರಳಿ ಸಂಕೋಚದಿಂದ ಮುದುರಿ ನಿಂತಿದ್ದ ಮಲ್ಲಿಕಾರ್ಜುನರನ್ನು ಕಂಡ ಯೋಗಿಗಳು "ಯಾರೀತ? ತಂದೆ ತಾಯಿಗಳು ಇವನನ್ನು ಇಷ್ಟು ಚಿಕ್ಕ ವಯಸ್ಸಿನಲ್ಲಿ ನಾಟಕ ಕಂಪೆನಿ ಸೇರಿಸಲು ಹೇಗೆ ಮನಸ್ಸು ಮಾಡಿದರು?" ಎಂದು ಕೇಳಿದರು. ಬಸವರಾಜರು ತಮ್ಮನನ್ನು ಅವರಿಗೆ ಪರಿಚಯಿಸಿಕೊಟ್ಟರು. ಪುಟ್ಟ ಹುಡುಗನ ವಿನಯವನ್ನು ಕಂಡು ನಸುನಕ್ಕ ಯೋಗಿಗಳು ಅವರ ಬೆನ್ನುತಟ್ಟಿ "ನೀನೇನೂ ಯೋಚಿಸಬೇಡ. ಹೆಸರು ಗಳಿಸುವಿ" ಅಂದರು. ಅವರ ಹುರಿದುಂಬಿಸುವಿಕೆಯ ಹಿಂದೆಯೇ ಬಂತು, ಮಲ್ಲಿಕಾರ್ಜುನ ಮನಸೂರರ ಬದುಕನ್ನು ಸೃಜನಶೀಲತೆಯತ್ತ ತಿರುಗಿಸಿದಂಥ ಅಪೂರ್ವ ಸನ್ನಿವೇಶ. ಕಂಪೆನಿಯ ಬಾಲಕೃಷ್ಣ ಬುವಾ ಈಚಲ ಕಾರಂಜಿ ಅವರ

ಶಿಷ್ಯರಾದ ನೀಲಕಂಠ ಬುವಾ ಮಿರಜಕರ ಬಾಗಲಕೋಟೆಯ ಕ್ಯಾಂಪ್‌ಗೆ ಬಂದಿದ್ದಾಗ ತಾವಾಗಿಯೇ "ನಿಮ್ಮ ಕಂಪೆನಿಯಲ್ಲಿ ಒಬ್ಬ ಹುಡುಗ ಬಹಳ ಪಸಂದಾಗಿ ಹಾಡತಾನಂತಲ್ಲ? ಯಾರವನು? ಎಲ್ಲಿದ್ದಾನೆ?" ಎಂದಾಗ ಸುತ್ತಲಿದ್ದವರಿಗೆ ಅವರು ವಿಚಾರಿಸುತ್ತಿರುವುದು ಮಲ್ಲಿಕಾರ್ಜುನರ ಬಗ್ಗೆ ಎಂಬುದರಲ್ಲಿ ಸಂದೇಹವೇ ಉಳಿಯಲಿಲ್ಲ. ಅವರನ್ನು ಸಹ ನಟರು ಮುಂದಕ್ಕೆ ತಳ್ಳಿದರು. ಪಾಂಚೋಬಾ ಅವರ ಹಾರ್ಮೋನಿಯಂ ಸಾಥಿಗೆ ಮಲ್ಲಿಕಾರ್ಜುನರು ಹಾಡುತ್ತಿದ್ದಂತೆಯೇ ನೀಲಕಂಠ ಬುವಾ, "ನಾನು ನಿನಗೆ ಶಾಸ್ತ್ರೀಯ ಸಂಗೀತ ಕಲಿಸುತ್ತೀನಿ. ಬರ್ತೀಯಾ?" ಎಂದರು ಬಸವರಾಜರತ್ತ ನೋಡಿ. "ಈ ಹುಡುಗ ನನ್ನ ಜತೆಗಿರಲಿ. ಇವನು ಉತ್ತಮ ಸಂಗೀತಗಾರನಾಗುತ್ತಾನೆ. ನಾಟಕ ಕಂಪೆನಿಯಲ್ಲಿ ಇದ್ದುಕೊಂಡು ತನ್ನ ಪ್ರತಿಭೆಯನ್ನು ಹಾಳುಮಾಡಿಕೊಳ್ಳುವುದು ಬೇಡ" ಎಂದರು. ತುದಿಗಾಲಲ್ಲಿ ನಿಂತಿದ್ದ ಮಲ್ಲಿಕಾರ್ಜುನರು ಗುರುಗಳ ಹಿಂದೆ ನಡೆದರು – ಭವಿಷ್ಯದಲ್ಲಿ ಭಾರೀ ಸಂಗೀತಗಾರರಾಗಲು ಮೊದಲ ಹೆಜ್ಜೆಯನ್ನಿರಿಸಿದರು

## ಹೆಗಲಿಗೆ ಹೊಸ ಹೊಣೆ



ಶಾಲಾ ವ್ಯಾಸಂಗವನ್ನು ತ್ಯಜಿಸಿದ ಮಲ್ಲಿಕಾರ್ಜುನ ಮನ್ಸೂರರ ಮುಂದಿನ ಯಾವುದೇ ಶಿಕ್ಷಣ ಸಂಗೀತ ಕ್ಷೇತ್ರದಲ್ಲಿ ಮಾತ್ರ ಎಂದು ನಿರ್ಧಾರವಾದಾಗ ಭೀಮರಾಯಪ್ಪನವರು ನಿಷ್ಕರ್ಷೆಯಾಗಿದ್ದ ಬಸವರಾಜರ ಮದುವೆಯೊಂದಿಗೆ ಮಲ್ಲಿಕಾರ್ಜುನರ ವಿವಾಹವನ್ನೂ ಮುಗಿಸಿಬಿಡುವ ತರಾತುರಿಯನ್ನು ತೋರಿದರು.

ಮಲ್ಲಿಕಾರ್ಜುನರ ಅಕಾಲ, ಕಲೆಗೆ ಕಲಾವಿದರಿಗೆ ಸಾಮಾನ್ಯ ಜನರಲ್ಲಿ ಗೌರವವಿರದೇ ಇದ್ದಂಥ ದಿನಗಳು. ನಾಟಕ ವೃತ್ತಿಯನ್ನು ಹಿಡಿಯುವವರು ಮಾನವಂತರಲ್ಲ ಎಂಬ ಅಭಿಪ್ರಾಯ ಪ್ರಚಲಿತವಿದ್ದ ಸಂದರ್ಭವದು. ಹೆಣ್ಣು ಕೊಡುವ ಮಾವಂದಿರಿಗೆ ನಾಟಕ ಕಂಪೆನಿಯಲ್ಲಿರುವ ತರುಣರ ಬಗ್ಗೆ ಸಂಶಯದ ದೃಷ್ಟಿ. ಮಲ್ಲಿಕಾರ್ಜುನರ ಮದುವೆಯೂ ಆಗಲೇಬೇಕೆಂದಾಗ, ಅದನ್ನು ಆಗಗೊಡಿಸಲು ಮುಂದೆ ಬಂದವರು ಅವರ ಸೋದರತ್ತೆ. ಮಲ್ಲಿಕಾರ್ಜುನರ ಅಕ್ಕ ಆಗ ಧಾರವಾಡ – ಹುಬ್ಬಳ್ಳಿ ನಡುವೆ ಇರುವ ಅಮರಗೋಳದಲ್ಲಿದ್ದರು. ಅವರ ಮಗಳು ಗಂಗಮ್ಮ. ಇನ್ನೂ ಐದು ವರ್ಷದ ಬಾಲಕಿ. ಸೋದರತ್ತೆ ಕನ್ಯೆಯ ತಾಯಿಯ ಮುಂದೆ ನಿಂತು ಹಿಂದಾಗಿದ್ದ ಮತ್ತ್ಯಾವುದನ್ನೋ ನೆನಪಿಸಿದರು : "ನಿನ್ನ ಮಗಳನ್ನು ಮಲ್ಲಿಕಾರ್ಜುನನಿಗೇ ಕೊಡುವು ದಾಗಿ ಅಣ್ಣನ ಮುಂದೆ (ಭೀಮ ರಾಯಪ್ಪ) ಬಡಿವಾರ ಮಾಡಿದ್ದೆ... ಈಗ ನಿನ್ನ ವಚನ ಪಾಲಿಸಬೇಕು". ಕೊಟ್ಟಿದ್ದ ಮಾತು. ಗಂಗಮ್ಮನನ್ನು ಮಲ್ಲಿಕಾರ್ಜುನರಿಗೆ ಕೊಡುವ ನಿರ್ಧಾರ ಮಾಡಿತು ಆಕೆಯ ಕುಟುಂಬ. ಮದುವೆಯ ದಿನ. ಸಕಲ ಸಿದ್ಧತೆಗಳಾಗಿದ್ದರೂ ಮದುಮಗನ ಆಗಮನವಾಗದೆ ಕನ್ಯಾಪಿತೃಗಳು, ಭೀಮರಾಯಪ್ಪನವರ ಮನೆಯವರು ಆತಂಕದಿಂದ ಕೈಕೈ ಹಿಸುಕಿಕೊಳ್ಳುತ್ತಿದ್ದಾಗ ಮುಹೂರ್ತವಿನ್ನೂ ಕೇವಲ ಐದು ನಿಮಿಷವಿದೆ ಎಂದಾಗ ಧಾವಿಸಿಬಂದರು ಮಲ್ಲಿಕಾರ್ಜುನ ಮನಸೂರರು. ಗಂಗಮ್ಮನ ಕೈ ಹಿಡಿದರು. ಸುದೀರ್ಘವಾದ ತಮ್ಮ ದಾಂಪತ್ಯಕ್ಕೆ ನಾಂದಿ ಹಾಡಿದರು. ವಿವಾಹಿತನಾದರೂ ಐದು ವರ್ಷದ ಬಾಲಕಿಯನ್ನು ಮಡದಿಯನ್ನಾಗಿಸಿ ಕೊಂಡಿದ್ದ ಅವರು ಬ್ರಹ್ಮಚರ್ಯಾಶ್ರಮವನ್ನೇ ಮುಂದುವರಿಸಬೇಕಾಯಿತು. ಭೀಮರಾಯಪ್ಪನವರೇ ಈ ಬಾರಿ ಅವರನ್ನು ಮಿರಜಿಗೆ ಕರೆದೊಯ್ದು ನೀಲಕಂಠ ಬುವಾರ* ಗುರುಕುಲಕ್ಕೆ ಕರೆದೊಯ್ದರು.

---

* ಕರ್ನಾಟಕದ ಇನ್ನಿಬ್ಬರು ಹೆಸರಾಂತ ಹಿಂದೂಸ್ತಾನಿ ಗಾಯಕರಾದ ಪಂಚಾಕ್ಷರಿ ಗವಾಯಿ ಹಾಗೂ ಬಸವರಾಜ ರಾಜಗುರು ಇವರುಗಳೂ ನೀಲಕಂಠ ಬುವಾ ಅವರ ಶಿಷ್ಯರು.

ಸಂತಾನವಿಲ್ಲದಿದ್ದ ನೀಲಕಂಠ ಬುವಾ ಹಾಗೂ ಅವರ ಪತ್ನಿ ಗಂಗಮ ಮಲ್ಲಿಕಾರ್ಜುನರನ್ನು ತಮ್ಮ ಮಗನೆಂದೇ ಭಾವಿಸಿದರು. ಅದು ನಿಜವಾದ ಅರ್ಥದಲ್ಲಿ ಗುರುಕುಲಪದ್ಧತಿಯಿದ್ದ ಮನೆ. ಮಲ್ಲಿಕಾರ್ಜುನ ಮನಸೂರರು ಮನೆಗೆಲಸಗಳನ್ನು ಮಾಡಿಕೊಡುತ್ತಿದ್ದುದಲ್ಲದೆ, ಅರೆಕ್ಷಣವನ್ನು ಪೋಲು ಮಾಡದೆ ಸಂಗೀತದ ತಾಲೀಮು ಮಾಡಲು ಅವಕಾಶ ಮಾಡಿಕೊಟ್ಟಿದ್ದ ಸ್ಥಳವದು. ಗುರುಗಳು ಇವರನ್ನು ಪಿಟೀಲಿನ ಜತೆಗೂ ದನಿಗೂಡಿಸಲು ಹೇಳುತ್ತಿದ್ದರು. ಕಟ್ಟುನಿಟ್ಟಿನ ಅಭ್ಯಾಸ. ಮುಂಜಾನೆ ನಾಲ್ಕು ಗಂಟೆಗೇ ತಾಲೀಮು ಆರಂಭ. ತಂಬೂರಿಯನ್ನು ಶೃತಿಗೊಳಿಸಿ ಕೈಲಿ ಹಿಡಿದು ಷಡ್ಜದ ಅಭ್ಯಾಸ (ಸಪ್ತಕದ ಪ್ರಥಮ ಸ್ವರ ಸಾ) ನಂತರ ಮತ್ತೆರಡು ತಾಸುಗಳು ವಿವಿಧ ಅಲಂಕಾರ ಸಾಧನೆ (ಸ್ವರಗಳ ಸಂಯೋಜನೆ ಮತ್ತು ಕ್ರಮ ಪರಿವರ್ತನೆ) ಛೋಟಾ ಖ್ಯಾಲದ ಹಾಡುಗಾರಿಕೆ (ದ್ರುತ್ ಅರ್ಥಾತ್ ಮಧ್ಯಮ ಹಾಗೂ ತೀವ್ರಗತಿ). ಇದಲ್ಲದೇ ಮಲ್ಲಿಕಾರ್ಜುನರು ಜಾಗೊ ಬ್ರಜರಾಜ ಕುವರ, ಭೈರವರಾಗದ ಜೀಜ್ - ಛೋಟಾ ಖ್ಯಾಲ, ನಂತರ ಬಡಾ ಖ್ಯಾಲ ರಾಗದ ವಿಸ್ತರಣೆ ಇವನ್ನೂ ಇಲ್ಲಿ ಕಲಿತರು. ದಿನವಿಡೀ ಮಾತ್ರವಲ್ಲ, ಸಂಜೆ ಹಾಗೂ ರಾತ್ರಿಯೂ ಇವರ ಅಭ್ಯಾಸ ನಡೆಯಬೇಕಿತ್ತು. ಐದು ವರ್ಷಗಳಲ್ಲಿ ಮಲ್ಲಿಕಾರ್ಜುನರು ಬಿಹಾಗ್, ಮಾಲಕಂಸ, ಭೂಪ, ಕಾಮೋದ, ತೋಡಿ, ಹಮೀರ, ದರಬಾರಿ, ಯಮನ್, ಕೇದಾರ, ಪೂರಿಯಾ, ಮಾರವಾ, ಅಲೈಯಾ, ಬಿಲಾವಲ, ಲಲಿತ ಮುಂತಾದ ನಲವತ್ತು ರಾಗಗಳನ್ನು ಅಭ್ಯಸಿಸಿದರು. ಹಲವಾರು ರಾಗಗಳಲ್ಲಿ ವಿವಿಧ ಅಸ್ಥಾಯಿಗಳನ್ನು ಕಲಿತು (ಚೀಜ್‌ನ ಪ್ರಥಮ ಭಾಗ) ಗಮಕ, ಮೀಂತ, ಖಿತಕಾ ಮುಂತಾದ ಅಲಂಕಾರಗಳ ಜ್ಞಾನವನ್ನು ಗಳಿಸಿದರು.

## ಪ್ರಸಿದ್ಧಿಗೆ ಪದಾರ್ಪಣೆ

ನೀಲಕಂಠ ಬುವಾರಲ್ಲಿ ಅಪಾರ ಶ್ರದ್ಧೆ ಭಕ್ತಿಗಳಿಂದ ಮನಃಪೂರ್ತಿಯಾಗಿ ತಾಲೀಮುಗಳನ್ನು ನಡೆಸಿದ ಮಲ್ಲಿಕಾರ್ಜುನ ಮನಸೂರರು ವಿದ್ಯಾರ್ಥಿಯಾಗಿಯೇ ಉಳಿದು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಅಗಾಧ ಸಮುದ್ರದಿಂದ ದೊರೆಯಬಲ್ಲದೆಲ್ಲವನ್ನೂ ಪಡೆದುಕೊಳ್ಳಬೇಕು



ಎಂದು ಹಂಬಲಿಸುತ್ತಿದ್ದಾಗಲೇ ಹದಿನಾರು ವರ್ಷದ ಅವರ ವಯೋಧರ್ಮಕ್ಕೆ ಅನುಗುಣವಾಗಿ ದನಿ ಒಡೆಯಿತು. ಸಪ್ತಕದಲ್ಲಿ ಪಂಚಮದಲ್ಲಿನ ಮೇಲಿನ ಸ್ವರಗಳನ್ನು ಗಂಟಲಿನಿಂದ ಹೊರಡಿಸುವುದು ಕಷ್ಟಕರ ಎನ್ನಿಸಿತು. ಆದರೆ ಮನ್ಸೂರರದ್ದು ಏಕಾಗ್ರಚಿತ್ತ. ಸಂಗೀತಕ್ಕೆ ತಮ್ಮನ್ನು ಅರ್ಪಿಸಿಕೊಂಡ ಮೇಲೆ ಹಿಂತಿರುಗುವುದು ಸಾಧ್ಯವೇ ಇಲ್ಲ ಎಂಬ ವ್ರತ. ಚಿತ್ತಸ್ವಾಸ್ಥ್ಯವನ್ನು ಉಳಿಸಿಕೊಂಡ ಮನ್ಸೂರರು ಧಾರವಾಡಕ್ಕೆ ವಾಪಸ್ಸಾಗಿ ಮೂರು ತಿಂಗಳ ಕಾಲ ಚೀಜುಗಳನ್ನು ಮತ್ತೆ ಮತ್ತೆ ಹಾಡಿಕೊಂಡರು. ರಾತ್ರಿ 10 ರಿಂದ ಬೆಳಗಿನ 6 ರವರೆಗೆ ರಿಯಾಜುಗಳನ್ನು ಅಭ್ಯಸಿಸಿದರು. ಮೂರು

ವರ್ಷಗಳೊಳಗಾಗಿ ಆಶ್ಚರ್ಯಕರ ರೀತಿಯಲ್ಲಿ ನಿರಂತರವಾಗಿ ದನಿಯನ್ನು ಪಳಗಿಸಿದ್ದರ ಪರಿಣಾಮವಾಗಿ, ಅದನ್ನು ಗಾಯನಕ್ಕೆ ತಕ್ಕದನ್ನಾಗಿಸಿಕೊಂಡರು. ಆದರೆ ಮನಸೂರರಿಗೆ ಗಳಿಕೆಯುಲ್ಲದ ಜೀವನ ದಿನದಿನಕ್ಕೆ ದುಸ್ತರವಾಗತೊಡಗಿದಾಗ 1929ರಲ್ಲಿ ಮತ್ತೆ ನಾಟಕ ಕಂಪೆನಿಗೆ ಹಿಂತಿರುಗಲೇಬೇಕಾಯಿತು.

ಕಂಪೆನಿ ಹಾಗೂ ಶ್ರೋತೃಗಳು ಮಲ್ಲಿಕಾರ್ಜುನ ಮನಸೂರರಿಗೆ ಹಾರ್ಧಿಕ ಸ್ವಾಗತ ನೀಡಿದರು. 'ವೀರ ಅಭಿಮನ್ಯು' ನಾಟಕದಲ್ಲಿ ಇವರು ತಮ್ಮ ಗಾಯನದ ಮೂಲಕ ಶ್ರೋತೃಗಳನ್ನು ತಣಿಸಿದರು. ಶಕುನಿಯ ಪಾತ್ರ ವಹಿಸಿ, ದೇಸಕಾರ ರಾಗದಲ್ಲಿ, 'ರಣರಂಗದಿ ವೀರನಾಗಿ', 'ಅರಿಯು ಪ್ರಬಲನಾಗಿ ದ್ವಾರದಿ ಬಂದು ನಿಂತಿರುವ' ಮುಂತಾದ ಹಾಡುಗಳನ್ನು ಹಾಡಿದಾಗ ಜನ ಆನಂದದಿಂದ ಹುಚ್ಚೆದ್ದರು. ಅವರ ಬಂಧು ಆಲದಕಟ್ಟಿ ಶಿವನಗೌಡರು ಇವರ ಬದುಕಿನ ಈ ಹಂತದಲ್ಲಿ ಇವರಿಗೆ ಆಸರೆಯಾಗಿ ನಿಂತರು. ಹಾವೇರಿಯಲ್ಲಿ ಪ್ರಥಮ ಬೈಠಕ್ ನಡೆಸಿದರೂ ಆದಾಯವೇನೂ ದೊರೆಯಲಿಲ್ಲ. ಆ ಹೊತ್ತಿಗೆ ಈರಾಣಿ ಭರಮಪ್ಪ ಎಂಬುವರು ಬಾಲಗಂಧರ್ವರು ತಮ್ಮ ಕಂಪೆನಿ ನಡೆಸುತ್ತಿದ್ದ ರೀತಿಯಲ್ಲೇ 'ವಾಣಿವಿಲಾಸ ನಾಟಕ ಮಂಡಲಿ'ಯನ್ನು ಸ್ಥಾಪಿಸಿದಾಗ ಸಹಜವಾಗಿಯೇ ಮಲ್ಲಿಕಾರ್ಜುನರನ್ನು ಆಹ್ವಾನಿಸಿದರು. ಆಗ ಮಲ್ಲಿಕಾರ್ಜುನರಿಗೆ ಹಣದ ತೀರಾ ಅಗತ್ಯವಿದ್ದ ದಿನಗಳು. ಖಾಯಂ ಆದಾಯ ಬೇಕಿತ್ತು. ಆದರೂ ಅವರು ವ್ಯವಸ್ಥಾಪಕರಿಗೆ ನೀಲಕಂಠ ಬುವಾರಿಗೆ ತಿಂಗಳಿಗೆ ಒಂದು ನೂರು ರೂಪಾಯಿ ವೇತನ ನೀಡಿ ತಮಗೆ ಶಿಕ್ಷಣ ನೀಡಲು ಆಮಂತ್ರಿಸಿದರೆ ಮಾತ್ರ ನಾನು ಕಂಪೆನಿ ಸೇರುತ್ತೇನೆ ಎಂದಾಗ ಅವರ ಷರತ್ತಿಗೆ ಒಪ್ಪಿಗೆ ದೊರೆಯಿತು. ಕಂಪೆನಿಯು 'ಕಿತ್ತೂರು ರುದ್ರಮ್ಮ' ನಾಟಕದಲ್ಲಿ ದಿಲಾವರಖಾನರಾಗಿ, 'ವರಪ್ರಧಾನ'ದಲ್ಲಿ ಮಾಧವಾಚಾರ್ಯರಾಗಿ, 'ಕಾಲ ಬೆದರಿ ಗಮಿಸುವ ಪಾಪಿಯೆ ಹರನ ಭಕುತಗೆ' ಎಂದು ಹಾಡತೊಡಗಿದಾಗ ಅವರ ಗಾಯನದಿಂದ ಮಂತ್ರಮುಗ್ಧರಾದಂತೆ ಜನರು ಸುತ್ತಲಿನ ಹಳ್ಳಿ

ಊರುಗಳಿಂದ ಚಕ್ಕಡಿ ಕಟ್ಟಿಸಿಕೊಂಡು ನಾಟಕಗಳನ್ನು ನೋಡಲು ಗುಂಪು ಗುಂಪಾಗಿ ಬಂದರು. ಮಲ್ಲಿಕಾರ್ಜುನರ ಬದುಕು ಅದೆಷ್ಟು ತಿರುವುಗಳನ್ನು ಪಡೆದು ಕೊಂಡಿತೋ! ಕಂಪೆನಿ ಬೀಳುತೆರೆಗೆ ಒಮ್ಮೆ ಬೆಂಕಿ ಹೊತ್ತಿಕೊಂಡಾಗ ಕಂಪೆನಿ ಮಲ್ಲಿಕಾರ್ಜುನರನ್ನು ಮತ್ತೆ ಧಾರವಾಡಕ್ಕೆ ಅಟ್ಟಿತು!

ಗದಗ್‌ಗೆ ಇವರು ಬೈಠಕ್‌ಗಳ ಸಲುವಾಗಿ ಬಂದಾಗ ಪ್ರಖ್ಯಾತ ಗ್ರಾಮಪೋನ್ ಸಂಸ್ಥೆಯಾದ ಎಚ್.ಎಂ.ವಿ.ಯ ಏಜೆಂಟರಾಗಿದ್ದ ಈಶ್ವರಪ್ಪ ಬೆಂಡಿಗೇರಿ ಇವರ ಸಂಗೀತಕ್ಕೆ ಮಾರುಹೋಗಿ 1933ರಲ್ಲಿ ಮುಂಬಯಿಗೆ ಇವರನ್ನು ಕರೆದೊಯ್ದರು; ಇವರ ಪ್ರಥಮ ಧ್ವನಿಮುದ್ರಿಕೆಯನ್ನು ಬಿಡುಗಡೆ ಮಾಡಿದರು. ಅಢಾಣಾ ರಾಗದಲ್ಲಿ 'ಕಂಗ ನವಾಮೋರಾ ಹಾಥ' ಹಾಗೂ ಮಲ್ಹಾರ ರಾಗದಲ್ಲಿ 'ಸ್ವಂಯಾ ಮೊರಾರೆ ಮೈತೊ' ಇವನ್ನು ಧ್ವನಿಮುದ್ರಿಕೆಯಲ್ಲಿ ಕೇಳಿದ ಮಹಾರಾಷ್ಟ್ರದ ಜನರು ಪ್ರಶಂಸೆಯ ಸುರಿಮಳೆಯನ್ನೇ ಹರಿಸಿದರು. ಎಚ್.ಎಂ.ವಿ. ಮತ್ತು ರೇನ್‌ಬೋ ಕಂಪನಿಗಳು ಇವರಿಂದ ಹಾಡಿಸಿದ ಇತರ ರಾಗಗಳು ಮತ್ತು ಗೀತೆಗಳೆಂದರೆ ಶಂಕರಾ, ಮಾಲಕೌಂಸ, ಜೈಜೈವಂತಿ, ಕಾಲಿಂಗತಾ, ಲಲಿತಾಗೌರಿ, ತೋಡಿ, 'ದೇಹತಾಯ ಶರಣಾಗತಾ' ಮತ್ತು 'ಜಾಂವ್ರೂ ಕುಡೆ ವನಮಾಲಿ' ನಾಟ್ಯಗೀತೆಗಳು ನನದಿಯಾ ಮಾರೆ ಕಾಹೆ ಬೋಲ, ಠುಮರಿ, ಶಿಶುನಾಳರ 'ತೇರನೆಳೆಯುತಾರೆ ತಂಗಿ' ಹಾಗೂ 'ನೀನೊಲಿದರೆ ಕೊರಡು ಕೊನರುವುದಯ್ಯಾ' ವಚನಗಳು, 'ಹೀಲಾತರವತ ಬಾಯೀ ಸಜನಾಸ ಏವೂನಚದೆ' ಮುಂತಾದವು.

ಮಲ್ಲಿಕಾರ್ಜುನ ಮನ್ಸೂರರಿಗೆ ಹೋದಲ್ಲೆಲ್ಲ ಗೆಳೆಯರು. ಒಮ್ಮೆ ಮುಂಬಯಿಗೆ ಭೇಟಿಯಿತ್ತಿದ್ದಾಗ ಗಿರಿಗಾಂದಲ್ಲಿನ ಮಿತ್ರ ವಿಷ್ಣುಪಂತ ಘಗನೀಸರ ಸರಾಫ ಅಂಗಡಿಯಲ್ಲಿ ಕೂತಿದ್ದರು. ಆಗ ಅಲ್ಲಿಗೆ ಬಂದವರು ಮಲ್ಲಿಕಾರ್ಜುನ ಮನ್ಸೂರರ ಗ್ರಾಮೊಫೋನ್ ರಿಕಾರ್ಡ್‌ಗಳನ್ನು ಆಲಿಸಿ ಖುಷಿಪಟ್ಟಿದ್ದ ಮಂಜೀಖಾನರು. ಜೈಪುರದ ಪ್ರಸಿದ್ಧ ಸಂಗೀತ ಮನೆತನದವರು. 'ಅಲ್ಲಾದಿಯಾ ಘರಾಣೆ' ಎಂಬ ಸಂಗೀತ ಪದ್ಧತಿಯನ್ನೇ ಹುಟ್ಟುಹಾಕಿದ್ದ ಪ್ರಖ್ಯಾತ ಅಲ್ಲಾದಿಯಾ ಖಾನರ ಮಗ, ಸಂಗೀತ ಸಾಮ್ರಾಟರ ಪುತ್ರ. ಹೆಸರಾಂತ

ಬುರ್ಜಿಖಾನರ ಸೋದರ. ಇವರ ಪರಿಚಯ ವಾಗುತ್ತಿದ್ದಂತೆಯೇ ಮಂಜೀಖಾನರು ಹೇಳಿದರು: 'ನಿಮಗೆ ಗಾನ ಹೇಳಿಕೊಟ್ಟರೆ ನಮ್ಮ ವಿದ್ಯೆ ಸಾರ್ಥಕವಾಗುತ್ತದೆ, ಬನ್ನಿ. ನಿಮ್ಮನ್ನು ಎರಡನೆಯ ಮಂಜೀಖಾನ ಮಾಡುತ್ತೇನೆ.'

ಹಿಂದೂಸ್ತಾನಿ ಸಂಗೀತ ಸಂಪ್ರದಾಯಕ್ಕೆ ಅನುಗುಣವಾಗಿ ಶಿಷ್ಯ ಸ್ವೀಕಾರ ವಿಧಿವತ್ತಾಗಬೇಕಾದರೆ ಅಲ್ಲೊಂದು ಸಮಾರಂಭ ಏರ್ಪಡ ಬೇಕಾಗುತ್ತದೆ. ಅದೆಂದರೆ 'ಗಂಡಾ ಬಂಧನ'. ಆದರೆ ಈ ಉತ್ಸವವನ್ನು ಏರ್ಪಡಿಸಲು ಮಲ್ಲಿಕಾರ್ಜುನರ ಕಿಸೆಯಲ್ಲಿ ಬಿಡಿಗಾಸೂ ಇರಲಿಲ್ಲ. ಕನಸಿನಲ್ಲೂ ಎಣಿಸಿರದಿದ್ದಂಥ ಘಟನೆಯೊಂದು ಗುರುವೇ ಶಿಷ್ಯನನ್ನು ಅರಸಿಕೊಂಡು ಬಂದಂಥ ಸಂದರ್ಭ – ಮಲ್ಲಿಕಾರ್ಜುನರ ಬಾಗಿಲಿಗೇ ಬಂದಿದೆ. ಪರಿಚಿತರಿಂದ ದೇಣಿಗೆ ಸಂಗ್ರಹಿಸಿದ ಮಲ್ಲಿಕಾರ್ಜುನರು ಸಮಾರಂಭವನ್ನು ಏರ್ಪಡಿಸಿ ಗುರುಗಳಿಂದ ತಮ್ಮ ಕೈಗೆ ಶುಭ ಕೆಂಪುದಾರವನ್ನು ಕಟ್ಟಿಸಿಕೊಂಡರು. ಶಿಷ್ಯನ ಬಾಯಿಗೆ ಮಿಠಾಯಿ ಹಾಕಿದ ಗುರುಗಳು ಇವರನ್ನು ಜೈಪುರ ಘರಾಣೆಯಲ್ಲಿ ಸ್ವೀಕರಿಸಿರುವುದಾಗಿ ನೆರೆದವರಿಗೆ ಘೋಷಿಸಿದರು. ಲಗುಬಗೆಯಿಂದ ಇವರಿಗೆ ವಿದ್ಯೆಯನ್ನು ಕಲಿಸಲು ಮುಂದಾದರು. ಮಲ್ಲಿಕಾರ್ಜುನ ಮನಸೂರರ ಮಾತಿನಲ್ಲೇ ಹೇಳುವುದಾದರೆ 'ಗುರು ಮಂಜೀಖಾನರು ಬಂಗಾರದ ಗಣಿಯಾಗಿದ್ದರು ನನ್ನ ಯೋಗ್ಯತೆಯ ಚಿಕ್ಕ ಹಾರೆಯಿಂದ ಎಲ್ಲ ಚಿನ್ನವನ್ನು ಅಗೆಯುವುದು ಸುಲಭವಾಗಿರಲಿಲ್ಲ."

ಮಲ್ಲಿಕಾರ್ಜುನರ ತಾಲೀಮು ಭೀಮಪಾಲಸ ರಾಗದಿಂದ ಪ್ರಾರಂಭವಾಯಿತು. 'ಮಂದ್ರ ಸಪ್ತಕದಿಂದ ತಾರಸಪ್ತಕದವರೆಗೆ ಮಿಂಚಿನೋಟದಿಂದ ಹರಿಯುತ್ತಿದ್ದ ತಾನಬಾಜಿಯನ್ನು ಕೇಳಿದಾಗ, ಬಣ್ಣಗಳಿಂದ ಕೂಡಿದ ಮದ್ದಿನಕುಡಿಕೆಯು ನೆಲದ ಮೇಲೆ ಸ್ಫೋಟವಾಗಿ ಗಗನಕ್ಕೆ ಹಾರಿ ಇನ್ನೊಮ್ಮೆ ಸಿಡಿದು ಪ್ರಕಾಶದ ಹನಿಗಳನ್ನು ಮಳೆಗರದಂತೆ

ತೋರುತ್ತಿತ್ತು. ತನಾನ ಬೋಲತಾನಗಳಲ್ಲಿ ರಸವು ತುಂಬಿ ತುಂಬಿ ತುಳುಕುತ್ತಿತ್ತು. ಹಾಡಿನ ಉದ್ದಕ್ಕೂ ನೀರಸವಾದ ಸ್ಥಾನ ಒಂದು ಸೂಚ್ಯಗ್ರದಷ್ಟೂ ಇರಲಿಲ್ಲ. ಎಲ್ಲಿಯೂ ಶ್ರಮವಿಲ್ಲ. ಎಲ್ಲವೂ ಸಹಜ, ಸಿದ್ಧ. ಅಲೌಕಿಕ ಸುಂದರ. ಎಲ್ಲಿಯೂ ಅರ್ಥವಿಲ್ಲದ, ರೂಢಿ ಜನ್ಯ ಜೋರು ಇರಲಿಲ್ಲ. ಸಮ್ಮ ಸಹ ತೊಟ್ಟಕಳಚಿ ಬಿದ್ದ ಸುಮದಂತೆ ಹಗುರ, ಹಸನ, ಹಸಾದ. ವಿಚಾರದ ಶ್ರಮವೂ ಸಹ ಭಾಸವಾಗುತ್ತಿರಲಿಲ್ಲ. ಕಲಾಕಾರನ ಅಂತರಾಳದಲ್ಲಿ ಸಂಗೀತವೂ ಸೆಲೆಯೊಡೆದು ನಿರರ್ಗಳವಾಗಿ ಹರಿಯುತ್ತಿರುವಾಗ ಹೊರಗೆ ಕೇಳಿಬರುವ ಸಂಗೀತ ಅದರ ಪ್ರತಿಬಿಂಬವಾಗುತ್ತವೆ. ಮುಗಿದಂತೆ ತೋರುತ್ತಿದ್ದಿತು. ಆ ಸಂಗೀತ ಎಂದೂ ಮತವು ಗಟ್ಟಿನಿಲ್ಲುವುದಿಲ್ಲವೆಂದು ಅಂದು ನನಗೆ ಮನದಟ್ಟಾಯಿತು. ಪ್ರತಿ ಶ್ವಾಸವೂ ಸಂಗೀತಮಯವಾದಾಗ ಹಾಡುವ ಕ್ರಿಯೆ ಬೇರೆಯಾಗಿ ಉಳಿಯದೆ ಹಾಡಿದ್ದೆಲ್ಲ ಪವಾಡವಾಗುತ್ತದೆ. ಒಂದೂವರೆ ತಾಸು ಖಾನ ಸಾಹೇಬರ ಭೀಮಪಲಾಸ ಶ್ರುತಿಗೊಂಡು ನಿಶ್ಯಬ್ಧವಾಯಿತು. ಆ ಶುಭ ದಿನ ನನ್ನ ಹೃದಯಾಂತರಾಳದಿಂದ ಮಲ್ಲಿಕಾರ್ಜುನನ ಪುನರ್ಜನ್ಮವಾಯಿತೆಂದರೆ ಅತಿಶಯೋಕ್ತಿಯಲ್ಲ.*

ಬೆಳ್ಳಗೆ 8 ರಿಂದ ಅಭ್ಯಾಸ ಆರಂಭವಾಯಿತೆಂದರೆ ಮಧ್ಯಾಹ್ನ 1ರವರೆಗೆ ಮುಂದುವರಿಯುತ್ತಿತ್ತು. ಮೊದಲು ಚೀಜ್. 'ರಾಗದ ಸಮಗ್ರ ದೃಷ್ಟಿಯಿಂದ ತಾಲದ ಆವರ್ತನದಲ್ಲಿ ತದೇಕ ಚಿತ್ತವಾಗಿ, ಲಯದ ವಿಧ ವಿಧವಾದ ಗತಿಗಳಲ್ಲಿ ಸಂಚರಿಸುವಾಗ ರಾಗ – ತಾಲ – ಲಯಗಳ ಅದ್ವೈತವಾಗಿ ಹೊಮ್ಮುವಂತಹದು ಈ ಉಪಜ'. ತಾಲೀಮು ಒಂದೂವರೆ ವರ್ಷ ಕಾಲ ನಡೆಯಿತು. ಇಲ್ಲಿ ಮಲ್ಲಿಕಾರ್ಜುನರು ತೋಡಿ, ಅಸಾವರಿ, ಭೈರವ, ಶಿವಮತ್, ಲಲಿತ, ದೇಸಕಾರ, ಗೌಡ ಸಾರಂಗ, ನಂದ, ಬಿಹಾಗಡೇ, ಪೂರಿಯಾ, ಮಾರವಾ, ಮಾಲಕಂಸ, ಭೀಮಪಲಾಸ, ನಟ ಬಿಹಾಗ, ಸಾವನಿ, ಜಯಂತ

---

* ನನ್ನ ರಸಯಾತ್ರೆ : ಮಲ್ಲಿಕಾರ್ಜುನ ಮನಸೂರ.

ಕಲ್ಯಾಣ ರಾಗಗಳಲ್ಲಿ ತಯಾರಿ ಪಡೆದರು. ಮನೆಗೆ ಹಿಂತಿರುಗಿದ ನಂತರವೂ ಅಭ್ಯಾಸ ಮುಂದುವರಿಯುತ್ತಲಿತ್ತು. ಶಿಷ್ಯನ ಅಸದಳ ವಿದ್ವತ್ತನ್ನು ಕಂಡು ಬೆರಗಾದ ಮಂಜೀಖಾನರೆಂದರು:

"ನಾನು ನಿನಗೆ ಒಂದು ವರ್ಷದಲ್ಲಿ ಕಲಿಸಿದಷ್ಟು ಕಲಿಸಲಿಕ್ಕೆ ಹತ್ತು ವರ್ಷ ಬೇಕಿತ್ತು. ಆದರೆ ಅದನ್ನೆಲ್ಲ ನಿನ್ನವಾಗಿಸಿಕೊಂಡ ಶ್ರೇಯಸ್ಸು ನಿನ್ನದು. ನಾನು ತಿಜೋರಿ ಕೀಲಿಕ್ಕೈ ಕೊಟ್ಟೆ, ಎರಡೂ ಕೈಗಳಿಂದ ಅದನ್ನು ಬಾಚಿಕೊಂಡ ಸಾಹಸ ಮಾತ್ರ ನಿನ್ನದು... ಪ್ರಾಯಶಃ ನಾನು ಇನ್ನು ಬಹಳ ದಿನ ಬದುಕಲಾರೆ. ನನ್ನೆಲ್ಲ ವಿದ್ಯೆಯನ್ನು ನಿನಗೆ ಕೊಡಲು ನಿಶ್ಚಯಿಸಿರುವೆ. ಸಂಗೀತದ ಅಂತರಂಗವನ್ನರಿತು ಅದಕ್ಕೆ ನನ್ನ ಮನಸ್ಸಿನಂತೆ ರೂಪ ಕೊಡುವ ಶಕ್ತಿ ನಿನ್ನಲ್ಲಿದೆಯೆಂದು ಮನಗಂಡಿದ್ದೇನೆ. ಅದಕ್ಕಾಗಿ ನೀನು ಕಲಿತುದೆಲ್ಲ ಸಿದ್ಧಿಯಾಗಲೆಂದು ಆಶೀರ್ವದಿಸುತ್ತೇನೆ."

ಹೀಗೆಂದು ಹೇಳಿದ ಮಂಜೀಖಾನರು ಹೆಚ್ಚು ಕಾಲ ಉಳಿಯಲಿಲ್ಲ. ನಂತರದ ವರ್ಷಗಳಲ್ಲಿ ಕಚೇರಿಯೊಂದರಲ್ಲಿ ಮಲ್ಲಿಕಾರ್ಜುನ ಮನಸೂರರು ಅದ್ಭುತವಾಗಿ ಹಾಡುತ್ತಿದ್ದಾಗ ಅದರ ಮಧ್ಯೆಯೇ ವೇದಿಕೆಗೆ ಬಂತೊಂದು ಚೀಟಿ. ರಸಿಕರೊಬ್ಬರಿಂದ ಬಂದ ಕೋರಿಕೆಯಿರಬಹುದು ಎಂದು ಭಾವಿಸಿ ಅದನ್ನು ಬಿಡಿಸಿದಾಗ ಮಲ್ಲಿಕಾರ್ಜುನರ ಮನಸ್ಸು ನೋವಿನಿಂದ ಮೂಕವಾಯಿತು. ಮಂಜೀಖಾನರ ದೇಹಸ್ಥಿತಿ ಸೂಕ್ಷ್ಮವಾಗಿ ಅವರನ್ನು ಆಸ್ಪತ್ರೆಗೆ ದಾಖಲು ಮಾಡಿರುವ ಸುದ್ದಿ ಅದರಲ್ಲಿತ್ತು. ಮಲ್ಲಿಕಾರ್ಜುನರು ತಮ್ಮ ಗುರುಗಳ ದರ್ಶನಕ್ಕಾಗಿ ಧಾವಿಸಿದರು. ಮಂಜೀಖಾನರ ನಿಧನದೊಂದಿಗೆ ಮಲ್ಲಿಕಾರ್ಜುನರು ನೆಚ್ಚಿಕೊಂಡಿದ್ದ ನಂಟೊಂದು ಹರಿದು ಹೋದಂತೆನಿಸಿತು. ತಮ್ಮ ಮುಂದಿನ ಅಭ್ಯಾಸಕ್ಕಾಗಿ ಅವರು ಮಂಜೀಖಾನರ ಸೋದರ ಬುರ್ಜೀಖಾನರ ಬಳಿಗೆ ಹೊರಟರು. ಆದರೆ ಅವರ ಬಳಿ ತಾಲೀಮುಗಳು ಹೆಚ್ಚುಕಾಲ ಮುಂದುವರಿಯಲಿಲ್ಲ.

'ತಾಲದ ಗತಿಯಲ್ಲಿ ರಾಗ ವಿಸ್ತಾರ ಹೊಂದುತ್ತದೆ. ಬೇರೆ ಬೇರೆ ಗತಿಗಳು ತಾಲದಲ್ಲಿ ಅಡಕವಾಗಿದ್ದ ಕಾರಣ ತಾಲಾಂಗ ಗಾಯಕಿಯಿಂದ ರಾಗ ಪ್ರಸ್ತಾರಕ್ಕೆ ಹೆಚ್ಚಿನ ಅವಕಾಶ ದೊರಕಿ ಬಂದಂತಾಗಿ ಹೊಸ ಹೊಸ ಸಂದರ್ಭಗಳು ಹುಟ್ಟುತ್ತಿದ್ದಂತೆ ರಾಗವು ಒಂದು ಅನಂತ ಕಲ್ಪಾನಾ ವಿಲಾಸವಾಗಿ ಬಿಡುತ್ತವೆ. ಮಂಜೀಖಾನರು ಖ್ಯಾಲದ ಸಂಕೀರ್ಣ ಸ್ವರಗಳ ಅನಂತ ವೈವಿಧ್ಯವನ್ನು ಕಲಿಸಿದರೆ, ಬುರ್ಜಿಖಾನರು ಸೂಕ್ಷ್ಮ ಚಿಕ್ಕ ಚಿಕ್ಕ ತೀವ್ರಗತಿಯ ತಾನಗಳ ಕಸೂತಿ ಕಲೆಯನ್ನು ಕಲಿಸಿದರು ಎನ್ನುತ್ತಾರೆ ಮಲ್ಲಿಕಾರ್ಜುನರು. ಬುರ್ಜಿಖಾನರಲ್ಲಿ ಇವರ ಶಿಷ್ಯತ್ವ ಅಲ್ಪಕಾಲದ್ದಾದರೂ 1950ರಲ್ಲಿ ಅವರು ನಿಧನರಾದಾಗ ಮಲ್ಲಿಕಾರ್ಜುನರ ಮತ್ತೊಂದು ಆಧಾರಸ್ಥಂಭ ಕಳಚಿದಂತಾಯಿತು. ಆಗಿನ ಸಂದರ್ಭವನ್ನು ಅವರೇ ವಿವರಿಸಿದ್ದಾರೆ: "1950ರ ನಂತರ ಕೊಲ್ಹಾಪುರಕ್ಕೆ ನಾನು ತಾಲೀಮಿಗಾಗಿ ಆಗಾಗ್ಗೆ ಮಾಡುತ್ತಿರುವ ಪ್ರವಾಸ ಮುಗಿದಂತಾಯಿತು. ತಾಲೀಮು ಸಫಲವಾಗುವುದು ರಿಯಾಜ ಮಾಡಿದಾಗ ತಾಲೀಮು ರಿಯಾಜಗಳು ವರ್ಷಗಟ್ಟಲೆ ನಡೆದ ನಂತರ ಸಾಧಕನು ಕೆಲಕಾಲ ಅಂತರ್ಮುಖಿಯಾಗಿ ಆತ್ಮನಿರೀಕ್ಷಣೆ ಮಾಡಬೇಕಾಗುತ್ತದೆ. ಸಾಧಕನು ಸ್ವರ ತ್ರಾಟಕ ಸಿದ್ಧಿಯನ್ನು ಪಡೆದು, ತಾಲದ ಆವರ್ತನೆಯನ್ನು ತನ್ನ ರಕ್ತಾಭಿಸರಣದಲ್ಲಿಯೇ ಕಂಡು, ತನ್ನ ನಾಡಿಯ ಮಿಡಿತದಲ್ಲಿಯೇ ಲಯದ ಗತಿಗಳನ್ನು ಅನುಭವಿಸಿ, ತನ್ನ ಅಂತರಾಳದಲ್ಲಿ ರಾಗದ ಸಮಗ್ರ ಪರಿಕಲ್ಪನೆಯನ್ನು ಮಾಡಿ ಕೊಳ್ಳಬೇಕಾಗುತ್ತದೆ. ಮನೆಯಲ್ಲಿ, ಮನದಲ್ಲಿ, ಮಕ್ಕಳಲ್ಲಿ ಸ್ವಸ್ಥವಾಗಿ ಕುಳಿತು ಚಿಂತನೆ ಮಾಡುತ್ತಿರುವಂತೆ ರಾಗದಲ್ಲಿಯೇ ಅನುರಾಗ – ವಿರಾಗಗಳನ್ನು ಕಂಡಾಗ ಸಂಗೀತ ಕೇವಲ ಇಂದ್ರಿಯದ ವಿಷಯಾಗಿರದೆ ಅದೊಂದು ಆಧ್ಯಾತ್ಮಿಕ ರಸಾನುಭವವೆಂಬುದು" ಮಲ್ಲಿಕಾರ್ಜುನರಿಗೆ ಮನದಟ್ಟಾಯಿತು.

ಉತ್ಕೃಷ್ಟ ಗುರುಗಳಲ್ಲಿ ಮಲ್ಲಿಕಾರ್ಜುನರು ನಡೆಸಿದ ತಾಲೀಮುಗಳ ಫಲ ಅವರಿಗೆ ದೊರೆಯತೊಡಗಿತು. ಉತ್ತರ ಭಾರತದಲ್ಲಿ ಸಂಚರಿಸಿ ದೊಡ್ಡ ದೊಡ್ಡ ನಗರ ಪಟ್ಟಣಗಳಲ್ಲಿ ಕಚೇರಿ ನಡೆಸುವ ಸುಯೋಗ

ದೊರೆಯಿತು. 1934ರಲ್ಲಿ ಗದಗಿನ ಮಹಾರಾಜರು ಇವರಿಗೆ 'ಸಂಗೀತರತ್ನ' ಬಿರುದನ್ನಿತ್ತು ಮಾನಪತ್ರ ನೀಡಿ ಗೌರವಿಸಿದರು. 1937ರಲ್ಲಿ ಶಿಕಾರಿಪುರದಲ್ಲಿನ ಸಂಗೀತ ಸಮ್ಮೇಳನದಲ್ಲಿ ಮೂರು ಬಾರಿ ಇವರ ಗಾಯನ ಏರ್ಪಟ್ಟಿತು. 1938ರಲ್ಲಿ ಮುಂಬಯಿಯ ಸಮ್ಮೇಳನದಲ್ಲಿ ಹಾಡಿದರು. ಮುಂಬಯಿ ರೇಡಿಯೋದಲ್ಲೂ ಕಾರ್ಯಕ್ರಮಗಳಾದವು. ನಾಗಪುರದಲ್ಲಿ ಇವರನ್ನು ಬರಮಾಡಿಕೊಂಡರು.

## ಜೈಪುರ ಘರಾಣೆಯ ಮಹಾನ್ ಗಾಯಕ

ಪಂ॥ ಮಲ್ಲಿಕಾರ್ಜುನ ಮನ್ಸೂರರು ಜೈಪುರ ಘರಾಣೆಯನ್ನು ಅಲ್ಲಾದಿಯಾ ಖಾನ ಘರಾಣೆಯೆಂದೂ ಪ್ರಸಿದ್ಧವಾಗಿರುವ ಸಂಗೀತ ಪದ್ಧತಿಯನ್ನು ಮುಗಿಲೆತ್ತರಕ್ಕೆ ನಿಲ್ಲಿಸಿ ಅದಕ್ಕೊಂದು ತಮ್ಮದೇ ಆದ ಹಿರಿಮೆಯನ್ನು ದೊರಕಿಸಿಕೊಟ್ಟ ಅಪ್ರತಿಮ ಗಾಯಕರು. "ಸಂಗೀತವು ಒಂದು ಮಹಾಸಾಗರದಂತಿದೆ. ಜೀವಮಾನವೆಲ್ಲ ಅದರಲ್ಲಿ ಮುಳುಗಿ ಏಳುತ್ತಿದ್ದರೂ ನನಗೆ ಅದರ ಆಳ ಸಿಗದಾಗಿದೆ. ಅದಕ್ಕೆ ಅಂತ್ಯವೇ ಕಂಡುಬರದಾಗಿದೆ. ಮುಂದೆ ಸಾಗುತ್ತಿದ್ದಂತೆ ಅದರ ಆಳ ಮತ್ತು ವೈಶಾಲ್ಯಗಳು ಹೆಚ್ಚುತ್ತಾ ಹೋದಂತನಿಸಿ ನಾನು ಅದರಲ್ಲಿಯ ಒಂದು ಅಣುಮಾತ್ರ ಎಂದೆನಿಸತೊಡಗಿದೆ." ಮಲ್ಲಿಕಾರ್ಜುನರು ಸಂಗೀತವನ್ನು ಕಂಡ ರೀತಿ, ಆರಂಭಿಸಿದ ಬಗೆ ಇಂಥಹುದು. ತಾವು ಮಹಾನ್ ಗಾಯಕರೆಂಬ ಅಹಂ ಮಲ್ಲಿಕಾರ್ಜುನ



ಮನ್ಸೂರರರನ್ನೆಂದೂ ಕಾಡಲಿಲ್ಲ. ಆದರೆ ಜನರು ಮಾತ್ರ ಇವರ ಗಾಯನ ಕೇಳಿ ಸಮ್ಮೋಹನ ಗೊಂಡರು; "ಮಲ್ಲಿಕಾರ್ಜುನ ಮನ್ಸೂರ ಸ್ವರಗಳನ್ನು ಹುಡುಕಿಕೊಂಡು ಹೋಗಬೇಕಾಗಿಲ್ಲ. ಸ್ವರಗಳೇ ಅವರನ್ನು ಹುಡುಕಿಕೊಂಡು ಬರುತ್ತವೆ" ಎಂದು ಹಾಡಿಹೊಗಳಿದರು. ಕನ್ನಡದ ಕವಿಶ್ರೇಷ್ಠರಲ್ಲೊಬ್ಬರಾದ ದ. ರಾ. ಬೇಂದ್ರೆಯವರಂತೂ ಮಲ್ಲಿಕಾರ್ಜುನರ ಸಂಗೀತವನ್ನು ಕೇಳಿ ಮಂತ್ರಮುಗ್ಧರಾಗಿ ಈ ಕೆಳಗಿನಂತೆ ಕವನವೊಂದನ್ನೇ ರಚಿಸಿಬಿಟ್ಟರು:

ಗಾಂಧರ್ವ ಮಾಯೆಯೇ
ಕುಣಿದಿತಪ್ಸರೆಯಂತೆ
ಮಿಂಚು ಬೇಲಿಗೆ ಬೆಳೆದ
ಸ್ವಾತಿಯಾ ಹನಿಯಂತೆ
ಕನ್ನಡದ ರಾಗವೇ
ಕಾಮೋದೆಗೆದ್ದಂತೆ
ಮಲ್ಲಿಕಾರ್ಜುನ ಶಿಖರ
ಮಲ್ಲಿಗೆಯೊಳಿದ್ದಂತೆ
ಶಿವನ ತಾಂಡವ ಮುಗಿಯೆ
ಶಿವಲಾಸ್ಯಕೆದ್ದಂತೆ
ಬಿಸಿಲ್ ಹಣ್ಣನುಂಡು ಚಂ-
ದ್ರನ ಜೇನು ಮೆದ್ದಂತೆ.
ಮನಸೂರೆ ಹೋಯಿತೋ
ಹೋ; ಇದ್ದಕ್ಕಿದ್ದಂತೆ

ಈ ಗೀತ ಹಾಡಿದುದು
ಹೊಸ ಸ್ವಪ್ನವಿದ್ದಂತೆ.
ಅಂತೆ, ಇಂತೆ, ಎನ್ನುತ್ತ
ಮನ ಮೀರಿ ನಾನಿಂತೆ
ಕಳಚಿ ಬಿದ್ದಿತ್ತು ಗೆಳೆಯ
ಜಗದ ಸಂತೆಯ ಚಿಂತೆ

ಮಲ್ಲಿಕಾರ್ಜುನ ಮನ್ಸೂರರ ಗಾಯನವನ್ನು ಕೇಳಿದ ಮಧ್ಯಪ್ರದೇಶದ ಕವಿ ಅಶೋಕ ವಾಜಪೇಯಿ ಹೇಳುತ್ತಾರೆ: "ಮುಂದೆ ಎಂದಾದರೂ ಈ ಶತಮಾನದ ಸೃಜನಾತ್ಮಕತೆಯನ್ನು ಅಳೆಯ ಹೊರಟರೆ, ಅಲ್ಲಿ ಮನ್ಸೂರರು ನಗುವ ಸೂರ್ಯನಂತೆ ಮೇಲಿದ್ದು ಬರುತ್ತಾರೆ. ಭಾರತೀಯ ಪರಂಪರೆಯ ಗಟ್ಟಿತನಕ್ಕೆ ವ್ಯಕ್ತಿಗತ ದಾಖಲೆಬೇಕೆಂದಾದರೆ ಮನ್ಸೂರರನ್ನೇ ನೆನೆಯ ಬೇಕಾಗುತ್ತದೆ ನಾವು."



ಹಿಂದೂಸ್ತಾನಿ ಸಂಗೀತ ಕ್ಷೇತ್ರದಲ್ಲಿನ ಅಗ್ರಮಾನ್ಯರನ್ನು ಸ್ಮರಿಸಿದ ಕೂಡಲೇ ನೆನಪಾಗುವುದು ಅಪ್ರತಿಮ ಸಂಗೀತಗಾರರನ್ನು ಬೆಳಿಸಿದ ಧಾರವಾಡ ಜಿಲ್ಲೆ. ದಿವಂಗತ ಪಂಡಿತ ಬಸವರಾಜ ರಾಜಗುರು ಒಮ್ಮೆ ಹೇಳಿದ್ದರಂತೆ : "ಈ ಪುಣ್ಯಭೂಮಿಯಲ್ಲಿ ಹುಟ್ಟಿದ ವಿದ್ವನ್ಮಣಿಗಳಾದ ಮಲ್ಲಣ್ಣ (ಪಂಡಿತ ಮಲ್ಲಿಕಾರ್ಜುನ ಮನಸೂರ), ಭೀಮಣ್ಣ (ಪಂಡಿತ ಭೀಮಸೇನ ಜೋಷಿ), ಗಂಗಮ್ಮ (ಗಂಗೂಬಾಯಿ ಹಾನಗಲ್) ಕುಮಾರ (ಕುಮಾರಗಂಧರ್ವ), ನಾನು ಹೀಗೆ ನಾವೆಲ್ಲರೂ ಒಂದೇ ಕುಟುಂಬದವರು, ನಮ್ಮ ಗುರಿ ಒಂದೇ. ಈ ಗುರಿಯ ಸಾಧನೆಗಾಗಿ ನಾವು ನೇರವಾಗಿ ಗಂಧರ್ವ ಲೋಕದಿಂದ ಇಲ್ಲಿಗೆ ಬಂದವರು." ಆದರೆ ಹೀಗೆಂದ ಮಾತ್ರಕ್ಕೆ ಕರ್ನಾಟಕದ ಮಿಕ್ಕೆಡೆಗಳಲ್ಲಿ ಹಿಂದೂಸ್ತಾನಿ ಸಂಗೀತದ ಪರಿಚಯ ಇರಲಿಲ್ಲವೇನೆಂದಲ್ಲ. ಕರ್ನಾಟಕ ಹಿಂದಿನಿಂದಲೂ ಕರ್ನಾಟಕ ಹಾಗೂ ಹಿಂದೂಸ್ತಾನಿ ಎರಡೂ ಸಂಗೀತ ಪದ್ಧತಿಗಳ ಸಂಗಮಕ್ಷೇತ್ರ. ಪ್ರಾಚೀನ ಕಾಲದಿಂದಲೂ ಕರ್ನಾಟಕವು ಹಿಂದೂಸ್ತಾನಿ ಸಂಗೀತಕ್ಕೆ ಕೊಟ್ಟಷ್ಟು ಪ್ರಾಶಸ್ತ್ಯವನ್ನು ದಕ್ಷಿಣದ ಮತ್ಯಾವ ರಾಜ್ಯವೂ ನೀಡಲಿಲ್ಲ. ಉದಾಹರಣೆಗೆ ಮೈಸೂರು ಮಹಾರಾಜರುಗಳು ತಮ್ಮ ಸಮ್ಮುಖದಲ್ಲಿ ನಡೆಯುತ್ತಿದ್ದ ಸಂಗೀತ ಕಚೇರಿಗಳಲ್ಲಿ, ಹಿಂದೂಸ್ತಾನಿ ಚೀಜ್‌ಗಳನ್ನು, ಆಲಾಪಗಳನ್ನು ಹಾಡಿಸಿ ಆನಂದಿಸುತ್ತಿದ್ದರು; ಪರೋಕ್ಷವಾಗಿ ಅವು ಹಳೆಯ ಮೈಸೂರಿನಲ್ಲೂ ಊರ್ಜಿತಗೊಳ್ಳಲು ಸಹಕರಿಸುತ್ತಿದ್ದರು. ವೀಣೆ ಶೇಷಣ್ಣನವರು, ಬಿಡಾರಂ ಕೃಷ್ಣಪ್ಪನವರು ದೇವರನಾಮಗಳು ಹಾಗೂ ಚೀಜ್‌ಗಳನ್ನು ಹಾಡದೆ ಕಾರ್ಯಕ್ರಮವನ್ನು ಮುಗಿಸುತ್ತಲೇ ಇರಲಿಲ್ಲ. ಮೈಸೂರಿನ ವಿದ್ವಾಂಸರ ಮೇಲೆ ಹಿಂದೂಸ್ತಾನಿ ಸಂಗೀತ ಪ್ರಭಾವ ಬೀರಿತ್ತು ಎನ್ನುವುದಕ್ಕೆ ವೀಣೆ ಶೇಷಣ್ಣನವರ ದರ್ಬಾರಿ ಕಾನಡ ಹಾಗೂ ಪೂರ್ವಿರಾಗಗಳ ತಿಲ್ಲಾನಗಳು ಮತ್ತು ವಾಸುದೇವಾಚಾರ್ಯರ ಮಾಂಡ್ ಮತ್ತು ಬೇಹಾಗ್ ರಾಗಗಳ ಕೃತಿಗಳೇ ಸಾಕ್ಷಿ ಎನ್ನುತ್ತಾರೆ ಸಂಗೀತಜ್ಞರು.

ಮನಸೂರರರೇ, ಒಂದೆಡೆ ಹೇಳುತ್ತಾರೆ : "ಹುಬ್ಬಳ್ಳಿ ಧಾರವಾಡದಲ್ಲಿ ಮೊದಲು ಮೊದಲು, ಸುಮಾರು ಐವತ್ತು ಅರವತ್ತು ವರ್ಷಗಳ ಹಿಂದೆ ಕರ್ನಾಟಕ ಸಂಗೀತವೇ ಇದ್ದದ್ದು. ಆದರೆ ಅಲ್ಲಿ ಹಿಂದೂಸ್ತಾನಿ ಸಂಗೀತಕ್ಕೆ ಹೆಚ್ಚಿಗೆ ಪ್ರಚಾರ ಹೇಗಾಯ್ತು ಅಂದರೆ, ಈ ನಮ್ಮ ಮೈಸೂರು ದಸರಾದ ಕಾಲಕ್ಕೆ ಉತ್ತರದ ಕಡೆಯವರು ಗಾಯಕರೂ, ವಾದಕರೂ, ದೊಡ್ಡ ದೊಡ್ಡ ಸಂಗೀತಗಾರರು ಇಲ್ಲಿಗೆ ಬರ್ತಿದ್ರು. ಹಾಡಲಿಕ್ಕೆ, ಬಾರಿಸಲಿಕ್ಕೆ ಬರೋ ಕಾಲಕ್ಕೆ ಧಾರವಾಡ ಮತ್ತು ಹುಬ್ಬಳ್ಳಿಯವರು ಅವರನ್ನು ತಮ್ಮಲ್ಲಿ ಇಳಿಸಿಕೊಳ್ತಿದ್ರು. ಆಗ ಆ ದೊಡ್ಡ ಸಂಗೀತಗಾರರನ್ನು ತಿಂಗಳು ತಿಂಗಳುಗಟ್ಟಲೆ ಇರಿಸಿಕೊಂಡು ಸಂಗೀತ ಕಚೇರಿ ಮಾಡಿಸ್ತಿದ್ರು, ಕೇಳ್ತಿದ್ರು. ಇದರ ಮೇಲೆ ಒಬ್ಬ ದೊಡ್ಡ ಸಂಗೀತಗಾರರು ಭಾಸ್ಕರಬುವಾ ಬಖಲೆ ಅನ್ನುವವರು, ಧಾರವಾಡದಲ್ಲಿ ಟ್ರೈನಿಂಗ್ ಕಾಲೇಜಿನಲ್ಲಿ ಸಂಗೀತಮಾಸ್ತರರಾಗಿದ್ದರು. ಹೀಗಾಗಿ ಆ ಹಿಂದೂಸ್ತಾನಿ ಸಂಗೀತದಲ್ಲಿ ಪಿತ್ರೇ ಬುವಾ ವಕೀಲ್, ಸುಬ್ಬರಾವ್ ವಕೀಲರು ಇಂತಹವರೆಲ್ಲ ಶಿಷ್ಯರಾದರು. ಮುಂದೆ ಆ ಹಿಂದೂಸ್ತಾನಿ ಸಂಗೀತ ಅಲ್ಲಿ ಬೆಳೀಲಿಕ್ಕೆ ಇವೆಲ್ಲಾ ಮುಖ್ಯ ಕಾರಣ." ಧಾರವಾಡದಲ್ಲಿ ಸ್ವಲ್ಪಕಾಲ ನೆಲೆಸಿದ್ದ ಹಾಗೂ ಹುಬ್ಬಳ್ಳಿ ಧಾರವಾಡಗಳಿಗೆ ಬಂದುಹೋಗುತ್ತಿದ್ದ ಇತರರೆಂದರೆ ನಥನ್‌ಖಾನ್, ರಹಮತ್ ಖಾನ್, ಮಿರಜದಲ್ಲಿ ನೆಲೆಸಿದ್ದ ಅಲ್ಲಾದಿಯಾ ಖಾನ್, ರಾಮಕೃಷ್ಣ ಬುವಾ ವಝೆ, ಪ್ರಸಿದ್ಧ ವೈಣಿಕ ಮುರಾದಖಾನ್, ಮುಂತಾದವರು. ಕನ್ನಡಿಗರು ಹಂಚಿಹೋಗಿದ್ದರಿಂದ ಅದರ ಪ್ರಭಾವ ಸಾಂಸ್ಕೃತಿಕ ಕ್ಷೇತ್ರದ ಮೇಲಾದರೂ ಸಂಗೀತದ ವಿವಿಧ ಪದ್ಧತಿಗಳು, ವಿವಿದೆಡೆಗಳಲ್ಲಿ ಬೆಳೆದುಕೊಂಡೇ ಬಂದವು.

**ಸ್ವರರಾಗ ಗೀತೆಗಳು ನಾಟ್ಯಾಭಿನೀತಿಗಳು ।**
**ಕಲೆದೇಳಿಸುವವು ಮನಸಿನಲ್ಲಿ ನಿದ್ರಿಸುವಾ ॥**
**ಪರಿಪರಿಯ ಭಾವಗಳ ಗೂಢ ಸ್ವಭಾವಗಳ ।**
**ಪರಮೇಷ್ಠಿ ಟೀಕುಕಲೆ – ಮಂಕುತಿಮ್ಮ ॥**

– ಎಂದು ಹಾಡಿದ್ದಾರೆ ಡಿ.ವಿ.ಜಿ. "ಬದುಕು ಸಹ್ಯವೂ ಸುಸೂತ್ರವೂ ಆಗಬೇಕಾದರೆ ಅದರಲ್ಲಿ ಸಂಗೀತ ಹೊರಹೊಮ್ಮಬೇಕು" ಎಂಬ ಧ್ಯೇಯವನ್ನು ಇಟ್ಟುಕೊಂಡಾಗ ಅದನ್ನು ಪೋಷಿಸುವ ಮಹನೀಯರು ಹುಟ್ಟಿಕೊಳ್ಳುತ್ತಲೇ ಇರುತ್ತಾರೆ.

ಭಾರತೀಯ ಸಂಗೀತದಲ್ಲಿ ಉತ್ತರಾದಿ ಮತ್ತು ದಕ್ಷಿಣಾದಿ ಎಂಬ ಎರಡು ಪದ್ಧತಿಗಳು ವಿಸ್ತೃತವಾಗಿ ಪ್ರಚಲಿತವಾಗಿದ್ದರೂ ಎರಡೂ ಪದ್ಧತಿಗಳಲ್ಲಿ ಒಂದೇ ರೀತಿಯ ಸ್ವರಗಳನ್ನು ಬಳಸಿ, ವಿಧಾನಗಳನ್ನು ಮಾತ್ರ ಬೇರೆ ಬೇರೆ ರೀತಿಗಳಲ್ಲಿ ಅಳವಡಿಸಿಕೊಳ್ಳಲಾಗುತ್ತದೆ. 'ಸರಿಗಮಪದನಿ' ಎಂಬ ಏಳು ಸ್ವರಗಳನ್ನೇ ತಳಹದಿಯನ್ನಾಗಿ ಇಟ್ಟುಕೊಂಡು ಇವನ್ನು ಜೋಡಿಸಿ ಹೊಸ ರಾಗಗಳು ಸೃಷ್ಟಿಯಾಗುತ್ತವೆ, ಹೊಸ ವಿಧಾನಗಳು ಹೊರ ಹೊಮ್ಮುತ್ತವೆ. ಆದರೆ ಸಾಮವೇದದಿಂದಲೇ ಉಗಮಿಸಿದ ಭಾರತೀಯ ಸಂಗೀತದಲ್ಲಿ ಗುರುತಿಸುವಂಥ ಬದಲಾವಣೆಯಾದದ್ದು ಮುಘಲರ ಕಾಲದಲ್ಲಿ. ಇದರ ಪ್ರಭಾವ ಮೊಟ್ಟ ಮೊದಲು ಆದದ್ದು ಹಿಂದೂಸ್ತಾನಿ ಸಂಗೀತ ಪದ್ಧತಿಯ ಮೇಲೆ, ತಾನಸೇನ, ಅಮೀರ್ ಖುಸ್ರು, ತಾನಸೇನನ ಗುರುವಾದ ಸ್ವಾಮಿ ಹರಿದಾಸ, ಮತ್ತೊಬ್ಬ ಶಿಷ್ಯನಾದ ಬೈಜೂ ಇವರಿಂದಾಗಿ ಹಾಗೂ ಮುಖ್ಯವಾಗಿ ಪರ್ಶಿಯನ್ನರ ಪ್ರಭಾವದಿಂದ ಖಯಾಲ್‌ಗಾಯನ ಆರಂಭವಾಯಿತು. ದೇವಮಂದಿರಗಳಲ್ಲಿ ಮಾತ್ರ ಕೇಳಿಬರುತ್ತಿದ್ದ ಸಂಗೀತ ರಾಜ ದರ್ಬಾರನ್ನು ಪ್ರವೇಶಿಸಿತು. ವಿಲಂಬಿತ ಆಲಾಪ ಕಡಿಮೆಯಾಗಿ "ಚೀಜ್" ಗಳನ್ನು ದ್ರುಪಲಯದಲ್ಲಿ ಹಾಡುವ ಖಯಾಲಿ ಹೆಚ್ಚಾಯಿತು. ಅದೇ "ಖಯಾಲ್" ಆಯಿತು. ಧ್ರುಪದದ ಸಂಗೀತದೊಂದಿಗೆ ಮೃದಂಗ ಪಕ್ಕವಾದ್ಯದ ಬದಲು ತಬಲಾ ಕಾಣಿಸಿಕೊಂಡಿತು. ತ್ಯಾಗರಾಜರು, ಪುರಂದರ – ಕನಕರಂತೆಯೇ ಸೂರ್‌ದಾಸ್, ಕಬೀರ್ ದಾಸ್‌ರು ಎಲ್ಲೆಡೆ ಪ್ರಖ್ಯಾತ ರಾದರು.

ಮಲ್ಲಿಕಾರ್ಜುನ ಮನಸೂರರು ತಮ್ಮ ಸಂಗೀತ ಪ್ರತಿಭೆಯನ್ನು ಪ್ರಕಾಶಕ್ಕೆ ತರಲು ಕಾಯಾ, ವಾಚಾ, ಮನಸಾ ಶ್ರಮಿಸಿದ್ದು ಜೈಪುರ ಘರಾಣೆಯನ್ನು

'ಸ್ವಾಧೀನ ಪಡಿಸಿಕೊಳ್ಳಲು', 'ಸಿದ್ಧಿಗೊಳಿಸಿಕೊಳ್ಳಲು'. ಘರಾಣೆ ಎನ್ನುವುದು ಉರ್ದು ಭಾಷೆಯಿಂದ ಉಗಮಿಸಿರುವ ಶಬ್ದ. ಸಾಮಾನ್ಯ ಅರ್ಥದಲ್ಲಿ, 'ಘರ' ಎಂದರೆ ಮನೆ ಅಥವಾ ಮನೆತನ ಎಂದಾಗುತ್ತದೆ. ಈ ಆಧಾರದ ಮೇಲೆ ಹುಟ್ಟಿಕೊಂಡಂಥವು ಗ್ವಾಲಿಯರ, ಕಿರಾಣಾ, ಜೈಪುರ, ಆಗ್ರಾ, ಇಂದೋರ, ಕಟಿಯಾಳು, ಸಹಸ್ವಾನ. ರಾಮಪುರ ಮುಂತಾದವು. ವಿವಿಧ ಮನೆತನಗಳಿಗೆ ಸೇರಿದ ವಿದ್ವಾಂಸರು ಯಾವ ಸ್ಥಳಕ್ಕೆ ಸೇರಿದ್ದರೋ, ಆ ಪ್ರದೇಶದ ಹೆಸರಿನ ಮೇಲೆ ಘರಾಣೆಗಳ ಹೆಸರುಗಳು ನಿರ್ಧಾರವಾಗುತ್ತವೆ. ಪ್ರತಿಯೊಂದು ಘರಾಣೆಯಲ್ಲೂ ಕೆಲವು ಸಾಮಾನ್ಯ ಶೈಲಿ ಹಾಗೂ ಲಕ್ಷಣಗಳಿರುತ್ತವೆ. ಸಂಗೀತಗಾರು ವಿದ್ವತ್ತನ್ನು ಕರಗತ ಮಾಡಿಕೊಳ್ಳುತ್ತ ಇರುವಂತೆಯೇ ತಮಗೆ ದಕ್ಕಿದ ಪ್ರತಿಭೆಯಿಂದ ಮೂಲವನ್ನು ಆಧರಿಸಿ ತಮ್ಮದೇ ರೀತಿಯಲ್ಲಿ ಮತ್ತೊಂದೇ ಘರಾಣೆಯನ್ನು ಸೃಷ್ಟಿಸುತ್ತಾರೆ. ಸಂಗೀತದ ಪ್ರಮುಖ ಅಂಗಗಳಾದ ಸ್ವರ ಮತ್ತು ಲಯಗಳನ್ನು ಬಳಸಿಕೊಳ್ಳುವ ರೀತಿಯಲ್ಲಿ ಘರಾಣೆಗಳ ನಡುವಣ ವ್ಯತ್ಯಾಸಗಳು ಅಡಗಿರುತ್ತವೆ. ಸದಾನಂದ ಕನವಳ್ಳಿಯವರ ಮಾತನ್ನಿಲ್ಲಿ ಉಲ್ಲೇಖಿಸುವುದಾದರೆ, "ಗ್ವಾಲಿಯರ ಘರಾಣಾ ಎಲ್ಲ ಘರಾಣೆಗಳ ಮೂಲಸ್ತೋತ್ರವಾಗಿದೆ. ಕಿರಾಣಾ ಘರಾಣಾ ಸ್ವರ ಅಥವಾ ಆಲಾಪ ಪ್ರಧಾನವಾಗಿದೆ. ಈ ಘರಾಣಾ ಎಷ್ಟೊಂದು ಮಿತಿಮೀರಿದ ಸ್ವರಪ್ರಜ್ಞೆಯುಳ್ಳದ್ದಾಗಿದೆಯೆಂದರೆ ಸ್ವರದ ಮೇಲೆ ಆಣೆಯಿಡುತ್ತದೆ : "ತಾಲ ಗಯ ತೊ ಬಾಲ ಗಯ, ಸೂರಗಯಾ ತೊ ಸಿರ ಗಯಾ" (ತಾಲ ಹೋದರೆ ಕೂದಲೆಳೆ ಹೋದಂತೆ, ಸ್ವರ ಹೋದರೆ ತಲೆಯೇ ಹೋದಂತೆ) ಎಂಬುದು ಅವರ ಧ್ಯೇಯ. ಆಕ್ರಮಣಕಾರಿ ಆಗ್ರಾ ಘರಾಣಾ ಲಯಪ್ರಧಾನ. ಗ್ವಾಲಿಯರ ಘರಾಣಾ ಸ್ವರ ಮತ್ತು ಲಯಗಳ ಸಮೂಹಿತವಾಗಿದ್ದರೆ ಜೈಪುರ ಘರಾಣಾ ಸಂಕೀರ್ಣ ಬೆಸುಗೆ."

ಮಲ್ಲಿಕಾರ್ಜುನ ಮನಸೂರರ ಗುರುಗಳಾಗಿದ್ದ ಅಲ್ಲಾದೀನ ಖಾನರು ರಾಜಾಸ್ತಾನದ ಜೈಪುರದ ಬಳಿಯಿರುವ ಉನಿಯಾರಾದಲ್ಲಿ ಜನಿಸಿದವರು. ಅವರ ಕುಟುಂಬ ಉತ್ತರ ಪ್ರದೇಶದ ಅತ್ರೌಳಿಯಿಂದ ವಲಸೆಗೊಂಡಂಥ

ಸಂಗೀತ ಪ್ರಧಾನ ಮನೆತನ. ಆದ್ದರಿಂದಲೇ ಇವರು ಸೃಷ್ಟಿಸಿದ ಘರಾಣೆಗೆ ಜೈಪುರ ಅಥವಾ ಅತ್ರೌಳಿ ಇಲ್ಲವೇ ಜೈಪುರ ಅತ್ರೌಳಿ ಹಾಗೂ ಅಲ್ಲಾದಿಯಾ ಖಾನ ಘರಾಣೆ ಎಂದು ಹೆಸರು. ಇವರ ಕುಟುಂಬದ ಹಿನ್ನೆಲೆ ತಾನಸೇನನಿಗೂ ಗುರುವಾಗಿದ್ದ ಸ್ವಾಮಿ ಹರಿದಾಸರ ಪೂರ್ವಿಕರಾದ ನಾಥ ವಿಶ್ವಂಭರದವರೆಗೂ ಹಿಂದಕ್ಕೆ ಚಾಚಿಕೊಳ್ಳುತ್ತದೆ. ಧ್ರುಪದ – ಧಮಾರದ ಅನೇಕ ಗಾಯಕರನ್ನು ಮಿಂಚಿಸುತ್ತದೆ.

ಅಂಚೀತದ ರಾಜನನ್ನು ತಮ್ಮ ವಿಶಿಷ್ಟ ಗಾಯನದಿಂದ ಸಮ್ಮೋಹನ ಗೊಳಿಸಿದಂಥ ಹಾಗೂ ಸಾವಿರಾರು ಚೀಜ್‌ಗಳ ಚೇತನವಿದ್ದ ಅಹಮ್ಮದ ಖಾನರಂಥ ತಂದೆಯನ್ನು ಹೊಂದಿದ್ದ ಅಲ್ಲಾದಿಯಾ ಖಾನರ ಮಗನಾದ ಮಂಜೀಖಾನ, ಬುರ್ಜೀಖಾನರಲ್ಲಿ ಶಿಷ್ಯತ್ವ ದೊರಕಿಸಿಕೊಂಡ ಸೌಭಾಗ್ಯ ಮಲ್ಲಿಕಾರ್ಜುನ ಮನ್ಸೂರರದ್ದಾಗಿತ್ತು ಎಂದ ಮೇಲೆ ಅವರು ತಮ್ಮ ಗುರುಗಳ ಕೀರ್ತಿಯನ್ನು ಹೋದೆಡೆಯಲ್ಲೆಲ್ಲ ಮೆರೆಸಿದ್ದರಲ್ಲಿ ಆಶ್ಚರ್ಯವಿಲ್ಲ. ಮನಸೂರರು ಧ್ರುಪದವನ್ನು ಖ್ಯಾಲವನ್ನಾಗಿ ಹಾಡುವಲ್ಲೇ ವಿಶಿಷ್ಟ ಬಗೆಯ ಛಾಪನ್ನು ಒತ್ತಿದರು. ಗುರುಗಳ ಹೆಸರನ್ನು ಉಳಿಸಿದರು. ಕೇಸರಬಾಯಿ ಕೇರಕರ, ಮೋಘಬಾಯಿ ಕುರ್ತಿಕರ, ಲಕ್ಷ್ಮೀಬಾಯಿ ಜಾದವ, ಮನೇಕಾ ಶಿರೋಡಕರ, ನಿವೃತ್ತಿ ಬುವಾ ಸರನಾಯಕ, ಕಿಶೋರಿ ಅಮೋಣಕರ ಮುಂತಾದ ಪಟ್ಟ ಶಿಷ್ಯರ ಸಾಲಿನಲ್ಲಿ ಮೊದಲಿಗರಾಗಿ ನಿಂತರು. ಮಲ್ಲಿಕಾರ್ಜುನರು ಬದುಕಿನುದ್ದಕ್ಕೂ ತಾನು ಮಿರಜದಲ್ಲಿ ಗುರುಕುಲದಲ್ಲಿ ಇದ್ದಾಗ ತಮ್ಮಣ್ಣಾ ವೆಂಟಮರಿ ಎಂಬ ಗೆಳೆಯರು ಸಾಂಗ್ಲಿಗೆ ಕರೆದೊಯ್ದಾಗ ತಾವು ಕೇಳಿದ್ದ ಅಲ್ಲಾದಿಯಾ ಖಾನರ ಗಾಯನವನ್ನು ಮತ್ತೆ ಮತ್ತೆ ಸ್ಮರಿಸಿಕೊಳ್ಳುತ್ತಿದ್ದರು. ಅವರ ಸಂಗೀತದ ಆಳ ವೈಶಾಲ್ಯಗಳು, ಅವರ ಉಪಜ ಅಂಗತಾನಗಳು, ಚೋಲತಾನಗಳು, ಇವುಗಳಿಂದ ಮಂತ್ರಮುಗ್ಧರಾದ ತಾವು ಅಂಥ "ಗಾಯಕಿ"ಯ ದೀಕ್ಷೆ ತಮಗೂ ಮುಂದೆ ದೊರೆಯುತ್ತದೆ ಎಂಬುದನ್ನು ಕನಸಿನಲ್ಲೂ ಎಣಿಸಿರಲಿಲ್ಲ ಎಂದುಕೊಳ್ಳುತ್ತಿದ್ದರು.

ಮಲ್ಲಿಕಾರ್ಜುನರಿಗೆ ಪರಂಪರೆಯ ಬಗ್ಗೆ ಅತಿಯಾದ ವ್ಯಾಮೋಹ. ಅದನ್ನು ಪ್ರಶ್ನಿಸಿದಾಗ ಅವರೆನ್ನುತ್ತಿದ್ದರು: "ಪರಂಪರೆಯೆಂದಾಗ ಮೂಗು ಮುರಿಯುವವರೆಷ್ಟೋ ಜನ; ಆದರೆ ನನ್ನ ಅಭಿಪ್ರಾಯದಲ್ಲಿ ಅದು ಅನಿವಾರ್ಯ. ಏಕೆಂದರೆ ಪರಂಪರೆಯ ಆಶ್ರಯದಲ್ಲಿಯೇ ವ್ಯಕ್ತಿಯ ಪ್ರತಿಭೆಯು ಅರಳುತ್ತದೆ. ಈ ವ್ಯಕ್ತಿಗತ ಪ್ರತಿಭೆಯೇ ಹಿಂದೂಸ್ತಾನಿ ಸಂಗೀತದಲ್ಲಿ ಅನೇಕ ಹೆಸರಾಂತ ಘರಾಣೆಗಳ ಅಸ್ತಿತ್ವಕ್ಕೆ ಕಾರಣೀಭೂತವಾದುದು. ಇತ್ತೀಚೆಗೆ ಈ ಘರಾಣೆಗಳ ಉಚ್ಚ ಸಂಸ್ಕೃತಿ ಪರಂಪರೆಯ ಹಾಗೂ ಹೃದಯವಂತಿಕೆಯ ಕೊರತೆಯಿದೆಯೋ ಅಲ್ಲಿಯವರೆಗೆ ಸಂಗೀತಕಲೆಯ – ಅದೇಕೇ ಯಾವುದೇ ಕಲೆಯ ಭವಿತವ್ಯವು ನಿರಾಶದಾಯಕವಾಗಿದೆಯೆಂದೇ ಹೇಳಬೇಕು."

## ಶೃತಿ ವೀಣೆಯ ಶಾರೀರ

ಮಲ್ಲಿಕಾರ್ಜುನ ಮನಸೂರರದ್ದು "ಶೃತಿ ವೀಣೆಯ ಶಾರೀರ" ವೆಂದು ಬಣ್ಣಿಸಿರುವುದುಂಟು. ತಾರಕ, ಮಂದ್ರಸ್ಥಾಯಿಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ಸಾಧಿಸುತ್ತ, ತಾನಕ್ಕೆ ಅಪೂರ್ವ ಶೋಭೆಯನ್ನು ತಂದೀಯುತ್ತ, ಸ್ಫುಟವಾಗಿ ಸ್ವರವನ್ನು ಹೊರಡಿಸುತ್ತಿದ್ದ ಮನಸೂರರ ಗಾಯನ ಕೇಳುವುದೇ ಒಂದು ಮಹದಾನಂದವೆನ್ನಿಸುತ್ತಿತ್ತು. ಅವರು ವಿಳಂಬ ಕಾಲದ ಗಾನಕ್ಕೆ, ಲಯಕಾಲದ "ಕೆಲಸ"ದ ಬಗ್ಗೆ ಅಪಾರ ಪ್ರೀತಿಯನ್ನು



ಹೊಂದಿದ್ದರು ಎಂದು ಅವರ ಸಂಗೀತವನ್ನು ಆಳವಾಗಿ ಅಭ್ಯಾಸ ಮಾಡಿರುವವರು ಹೇಳಿರುವು ದುಂಟು. ಪಲ್ಲವಿಯನ್ನು ವಿಲಂಬದಲ್ಲಿ ಹಾಡುವಾಗ ಅಮೋಘವಾದ ಅರ್ಥರೇಖಿ ಗಳನ್ನು ಹೊಮ್ಮಿ ಸುತ್ತಿದ್ದರು. ಅಸ್ತಾಯಿ, ಅಂತರ (ಪಲ್ಲವಿ, ಅನುಪಲ್ಲವಿ) ಇವರ ಮೀಂಡ (ವರೇಖಿ) ಸರ್ವೋತ್ಕೃಷ್ಟ ವಾಗಿದ್ದವು ಎಂದು ಹೇಳಿರುವುದುಂಟು. ತಾರಸ್ತಾಯಿ. ತಾನಗಳು, ತಾರಮುದ್ರ ಸ್ಥಾಯಿಗಳ ಸಂಚಾರ, ಶಾರೀರ ಧರ್ಮ ಇವುಗಳ ವಿಶಿಷ್ಟತೆಯನ್ನು ಕೊಂಡಾಡಿರುವುದುಂಟು. ತೋಡಿ, ಭೀಮಪಲಾಸ್, ಯಮನ್, ಭಾಗೇಶ್ರೀ, ರಾಗಗಳನ್ನು ಹಾಡುವಾಗ ಮನಸೂರರು ಅವುಗಳ ಮೇಲೆ ತಮ್ಮ ವ್ಯಕ್ತಿತ್ವದ ಛಾಪನ್ನು ಪ್ರದರ್ಶಿಸುತ್ತಿದ್ದರು. ನಂದ, ಜಯಜಯವಂತಿ, ಮಾರುಬೇಹಾಗ್, ಬಿಭಾಸ್, ಅಸಾವರಿ, ನಾಯಕಿ ಕಾನಡಾ, ಸಂಕರಾ, ಖಂಬಾವತಿ, ನಟ ಬೇಹಾಗ, ಛಾಯಾನಟ, ಗೌಡಮಲ್ಲಾರ ಮುಂತಾದ ಅಪರೂಪ ರಾಗಗಳನ್ನು, ಕಷ್ಟಸಾಧ್ಯವಾದ ವಿಸ್ತಾರವನ್ನು ಲೀಲಾಜಾಲವಾಗಿ ನಿರ್ವಹಿಸುವ ಕಲೆ ಅವರಿಗೆ ಸಿದ್ಧಿಸಿತ್ತು. ಮಾರುಬೇಹಾಗ್, ಭೈರವ ಬಹಾರ್, ನಟಬೇಹಾಗ್ ಮುಂತಾದ ದ್ವಂದ್ವ ಮೇಳ ರಾಗಗಳನ್ನು ಹಾಡುವಾಗ ಅವರ ಪ್ರತಿಭೆಯು ಪೂರ್ಣ ಪ್ರಕಾಶಕ್ಕೆ ಬರುತ್ತಿತ್ತು. ತಾಳಕ್ಕೆ ಅವರು ಮಹತ್ತ್ವ ನೀಡುತ್ತಿದ್ದರಾದರೂ ಅವರೆಂದೂ ತಾಳಕ್ಕೆ ದಾಸರಾಗಿರಲಿಲ್ಲ ಎಂದು ವ್ಯಾಖ್ಯಾನಿಸಿರುವುದುಂಟು.

ರಾಣಿ ಬೆನ್ನೂರಿನಲ್ಲಿ 1937ರಷ್ಟು ಹಿಂದೆಯೇ ಕಚೇರಿಯೊಂದು ನಡೆದಿತ್ತು. ತಬಲಜೀ ಶಿರಹಟ್ಟಿ ನಾಗಪ್ಪರೆಂದರೆ ಗಾಯಕರಿಗೆ ನಡುಕ. ಅಂಥ ಅಮೋಘ ತಬಲಾ ವಾದಕರವರು. ಆದರೆ ಮಲ್ಲಿಕಾರ್ಜುನ ಮನಸೂರರಿಗೆ ತಬಲಾಸಾಥಿ ನೀಡಿದಾಗ ಆತನೆಂದರು: "ಲಯದ ಇಂಥ ತಪ್ಪದ ತಿಳುವಳಿಕೆಯನ್ನು ನಾನು ಇದುವರೆಗೆ ಯಾವ ಗಾಯಕನಲ್ಲೂ ಕಂಡಿಲ್ಲ." ಶಿಕಾರಿಪುರದ ಸಂಗೀತ ಸಮ್ಮೇಳನದಲ್ಲಿ ಅವರು ಮೂರು ರಾತ್ರಿಗಳು ಸುಮಾರು 20,000 ಸಭಿಕರ ಮುಂದೆ ನಡೆಸಿದ ಕಚೇರಿಗಳನ್ನು ಜನ ವರ್ಷಗಟ್ಟಲೆ ಮೆಲುಕು ಹಾಕಿದರು. 1959ರಲ್ಲಿ ಜಲಂಧರದಲ್ಲಿ ಅಖಿಲ

ಭಾರತದ ಸಂಗೀತ ಸಮ್ಮೇಳನದಲ್ಲಿ ಇವರ ಖ್ಯಾತಿ ಶಿಖರಕ್ಕೇರಿತ್ತು. ಪಂಜಾಬದ ಖ್ಯಾತ ಗಾಯಕರಾದ ಹರಿಶ್ಚಂದ್ರ ಬಾಲಿ ತಮ್ಮ ಸಂತಸವನ್ನು ತಡೆಯಲಾರದೆ ಎದ್ದುನಿಂತು ಹೀಗೆಂದರು : "ನಿಜಕ್ಕೂ ಇಂದು ಪಂಜಾಬ ಧನ್ಯವಾಗಿದೆ. ಬಹು ಹಿಂದೆ ಅಲ್ಲಾದಿಯಾ ಖಾನರ ಗಾಯನ ಕೇಳುವ ಸೌಭಾಗ್ಯ ದೊರೆತಿದ್ದ ನಮಗೆ ಎಷ್ಟೋ ವರ್ಷಗಳ ನಂತರ ಅದೇ ಉಚ್ಚಮಟ್ಟದ ಗಾಯನ ಕೇಳುವ ಅವಕಾಶ ಪ್ರಾಪ್ತವಾಗಿದೆ. ದೇವರ ದಯೆಯಿಂದ ಪಕ್ವಗೊಂಡಿರುವ ಈ ಸ್ವರಗಳು ಮತ್ತೆ ಗುರುಗಳ ಕೃಪೆಯಿಂದ ಪ್ರಾಪ್ತವಾದ ಈ ವಿದ್ವತು ಎರಡೂ ಅತುಲ್ಯ ಹಾಗೂ ಅಮೂಲ್ಯವಾದವುಗಳು." ಬಿಹಾರ ರಾಗವನ್ನು ಆಸ್ವಾದಿಸಿದ ಶ್ರೋತೃವೃಂದ ಮತ್ತೆ ಮತ್ತೆ ಅದನ್ನು ಹಾಡುವಂತೆ ಮಲ್ಲಿಕಾರ್ಜುನರನ್ನು ವಿನಂತಿಸಿ ಕೊಂಡರು. ಜೋಗಿಯಾ ಮತ್ತು ಅಸಾವರಿ ರಾಗಗಳನ್ನು ಸಂಪೂರ್ಣವಾಗಿ ಸವಿದರು

ಪ್ರೊಫೆಸರ್ ಬಿ.ಆರ್. ದೇವಧರ್ ಅವರು ಮಲ್ಲಿಕಾರ್ಜುನ ಮನ್ಸೂರರ ಬಗ್ಗೆ ಆಡಿರುವ ಮಾತುಗಳು, ಇವರ ಕೀರ್ತಿಗೆ ಮೆರುಗು ಕೊಟ್ಟಿರುವಂಥದ್ದು: "ಪಂಡಿತ ಮಲ್ಲಿಕಾರ್ಜುನ ಮನಸೂರ ಓರ್ವ ಅತ್ಯಂತ ಮೆಹನತೀ ಗಾಯಕರಾಗಿದ್ದಾರೆ. ತಮ್ಮ ಮೆಹನತ್ತಿನಿಂದ ತಮ್ಮ ಧ್ವನಿಯನ್ನು ಅತ್ಯಂತ ಸುರೇಲಿ ಮತ್ತು ಸುಮಧುರವನ್ನಾಗಿ ಮಾಡಿಕೊಂಡಿದ್ದಾರೆ. ತತ್ಪರಿಣಾಮವಾಗಿ ಯಾವ ಸಪ್ತಕದಲ್ಲಾದರೂ ಸರಿ ಅವರ ತಾನಿನ ಬಾಣಗಳು ಸ್ವರಸ್ಥಾನಗಳನ್ನು ಬಿಟ್ಟು ಅತ್ತಿತ್ತ ಚಲಿಸುವುದಿಲ್ಲ. ತಾರಾ ಸಪ್ತಕದಲ್ಲಿಯ ಅವರ ತಾರಷಡ್ಜವು ಆಕಾರ ಈಕಾರಗಳೆರಡರಲ್ಲೂ ತಯಾರಿಯ ನಾದ ವಿಶೇಷದಲ್ಲಿ ಏಕಜೀವವಾಗಿ ಹೋಗಿ ಶ್ರೋತೃಗಳು ತಮಗರಿವಿಲ್ಲದಂತೆಯೇ ವಾಹವ್ವಾ! ವಾಹವ್ವಾ! ಎಂದು ಉದ್ಗಾರ ತೆಗೆಯುವಂತಾಗುವುದು. ಅವರ ಸಂಗೀತವು – ಅದರಲ್ಲಿ ಚಿಕ್ಕ ಚಿಕ್ಕ ಆಕೃತಿಗಳಿರಲಿ, ಯಾವುದೇ ಸ್ವರ ಸಂಗತಿಯಿರಲಿ, ತಾನಗಳಿರಲಿ, ಗಮಕ ಅಂಗಗಳಿರಲಿ–ಪ್ರತಿಯೊಂದು ಸ್ವರ ಕಂಪನದ ಕಣಕಣಗಳಲ್ಲಿ ಸುರೇಲಿತವು ತುಂಬಿರುವುದರಿಂದ ಕೇಳುಗರಿಗೆ ಒಂದು

ವಿಲಕ್ಷಣವಾದ ಆನಂದವನ್ನುಂಟುಮಾಡುತ್ತದೆ... ಈ ಘರಾಣೆಯ ಸಂಗೀತವೆಂದರೆ ತಂತಿಯ ಮೇಲಣ ಸರ್ಕಸ್ ಇದ್ದಂತೆ. ಕಿಂಚಿತ್ ತೂಕ ತಪ್ಪಿದಲ್ಲಿ ರಾಗ ಭಾವ ಮಂದಿರವು ಕುಸಿದು ಬೀಳುತ್ತದೆ. ಈ ಘರಾಣೆಯ ಸಂಗೀತ ಪ್ರಣಾಲಿಯಲ್ಲಿಯ ರಾಗಗಳನ್ನು ಖಚಿತ ಸ್ವರ ಸಮುದಾಯದಿಂದ, ಖಚಿತವಾದ ಮಾರ್ಗದಿಂದ, ಖಚಿತವಾದ ರೀತಿಯಲ್ಲಿ ಹಾಡಿದರೇನೇ ರಾಗಗಳ ಪರಿಪೂರ್ಣ ಸ್ವರೂಪವು ಮೂಡಿಬಂದು ರಾಗರಸಭಾವವು ಸುಸ್ಪಷ್ಟವೂ ಪರಿಣಾಮಕಾರಕವೂ ಆಗುವುದು. ಪಂಡಿತ ಮಲ್ಲಿಕಾರ್ಜುನ ಮನಸೂರರು ತಮ್ಮ ಮೆಹನತ್ತಿನಿಂದ ಜೈಪುರ ಘರಾಣೆಯ ಸಂಗೀತವನ್ನು ಅತ್ಮಸಾತ್ ಮಾಡಿಕೊಂಡಿದ್ದು ಅವರು ಅದರ ಮೇಲೆ ಸಾಧಿಸಿದ ಪ್ರಭಾವದಿಂದಲೇ ಕಂಡುಬರುತ್ತದೆ." ಮತ್ತೊಬ್ಬ ಅಭಿಮಾನಿ ಪು. ಲ. ದೇಶಪಾಂಡೆಯೆನ್ನುವುದು ಇದು : "ಮಲ್ಲಿಕಾರ್ಜುನ ಮನಸೂರ ಸದಾ ಷಡ್ಜದಲ್ಲಿ ವಾಸ್ತವ್ಯ ಮಾಡುವ ವ್ಯಕ್ತಿ. ಅದರ ಜವಾರಿ ರಾಗ ಷಡ್ಜ ತಂಬೂರಿಯ ನಾದದೊಂದಿಗೆ ಏಕಜೀವವಾಗುತ್ತಿತ್ತು... ಮನಸೂರರಿಗೆ ಗುರುಗಳನ್ನು ತದ್ರೂಪ ಅನುಕರಿಸುವುದಲ್ಲ. ಪುಣೆಯಲ್ಲೊಮ್ಮೆ ಅವರು ಪೇಶ್ ಮಾಡಿದ ಅನಾವಟ ರಾಗಗಳನ್ನು ಕೇಳಿ ನಮ್ಮೆಲ್ಲರ ಬುದ್ಧಿಯೇ ಮಂಕಾಗಿ ಹೋಯಿತು."

## ವಚನ ಗಾಯನ ಪ್ರವರ್ತಕ

ಕನ್ನಡ ಸಾಹಿತ್ಯದ ಸುವರ್ಣ ಯುಗವೆನ್ನಿಸುವ 12ನೆಯ ಶತಮಾನದಲ್ಲಿ ಶಿವಶರಣ – ಶರಣೆಯರು ತಮ್ಮ ಅನುಭವಗಳನ್ನು, ತಾನು ನಂಬಿದ ದೈವದ ಹಿರಿಮೆಯನ್ನು ಹಾಗೂ ಜೀವನಸೂತ್ರಗಳನ್ನು ಅಭಿವ್ಯಕ್ತಿಸಲು ಮಾಧ್ಯಮವನ್ನಾಗಿ ಬಳಿಸಿ ಕೊಂಡಂಥ ಪ್ರಕಾರ ವಾದ ವಚನಗಳನ್ನು ಗಾಯನ ಸಭೆಗಳಲ್ಲಿ ಹಾಡುವುದೇ ಹಿಂದೊಮ್ಮೆ ವಿರಳವೆನ್ನಿಸಿತ್ತು. ನೇರ ಮಾತುಗಳಲ್ಲಿರುವ, ಅತ್ಯಂತ ಸತ್ತ್ವಶಾಲಿಯಾದ ವಚನಗಳ ಭಾವ ಅರ್ಥ ಗಳನ್ನು ಅರಿತುಕೊಂಡು ಅವನ್ನು ಸಂಗೀತದ ಮೂಲಕ ಪ್ರಕಾಶಗೊಳಿಸಿ ದಾಗ ಅವು ಶ್ರೋತೃಗಳಲ್ಲಿ ಅವರ್ಣನೀಯ ವಾದ ಆನಂದವನ್ನು ಉಂಟು

ಮಾಡುವ ಎಲ್ಲ ಸಾಧ್ಯತೆಗಳೂ ಉಂಟು ಎಂಬುದನ್ನು ಮೊಟ್ಟಮೊದಲಿಗೆ ಅರಿತ ಶಾಸ್ತ್ರೀಯ ಸಂಗೀತಗಾರರಲ್ಲಿ ಮಲ್ಲಿಕಾರ್ಜುನ ಮನಸೂರರು ಪ್ರಮುಖರು. ಅಭಂಗ ಅಥವಾ ಭಜನೆಗಳಂತೆ ಸಂಗೀತಸಭೆಗಳಲ್ಲಿ ಸ್ಥಾಪಿತವಾಗಿರದೇ ಇದ್ದಂಥ ವಚನಗಳನ್ನು ಹಾಡಿದ ಮಲ್ಲಿಕಾರ್ಜುನ ಮನಸೂರರು ಸಂಗೀತಗಾರರಿಗೇ ಹೊಸ ಪಥವನ್ನು ಹಾಕಿಕೊಟ್ಟರು; ವಿನೂತನ ಆಯಾಮವೊಂದನ್ನು ತೆರೆದಿಟ್ಟು ಕೃತಕೃತ್ಯರಾದರು.

ಮನಸೂರರ ಕಟ್ಟಾ ಅಭಿಮಾನಿಗಳಾಗಿದ್ದ ಹಾಗೂ ಕನ್ನಡ ಭಾಷೆಯ ಪ್ರಚಾರವನ್ನೇ ತಮ್ಮ ಉಸಿರಾಗಿಸಿಕೊಂಡಿದ್ದ ಪ್ರಸಿದ್ಧ ಕಾದಂಬರಿಕಾರ ಅ. ನ. ಕೃಷ್ಣರಾಯರು ಮನ್ಸೂರರನ್ನು ಭೇಟಿ ಮಾಡಿದಾ ಗಲೆಲ್ಲ ಅವರನ್ನು ಕೇಳಿ ಕೊಳ್ಳುತ್ತಿದ್ದರು. ಕಚೇರಿಗಳಲ್ಲಿ ಚೀಜ್‌ಗಳನ್ನು ಹಾಡುವಂತೆಯೇ ವಚನಗಳನ್ನೂ ಹಾಡಿ ಅವನ್ನು ರಸಿಕ ಸಭಿಕರಿಗೆ ಎಟುಕುವಂತಾಗಿಸಿ ಎಂದು. "ಇವನ್ನೇನು ಹಾಡುತಾರ್ರೀ, ಇವೇನು ಚೀಜಲ್ಲ ತಾಜಲ್ಲ. ರಾಗ ಇಲ್ಲ, ತಾಳ ಇಲ್ಲ," ಮಲ್ಲಿಕಾರ್ಜುನ ಮನಸೂರರು ಹೀಗೆಂದು ಅನಾಸಕ್ತಿ ತೋರಿದರೂ ಪ್ರಯತ್ನವನ್ನು ಬಿಡದ ಅ.ನ.ಕೃ. ತಾವೇ ಒಂದೆರಡು ವಚನಗಳನ್ನು ಹಾಡಿ ತೋರಿಸಿದಾಗ "ಅದನ್ನು ಹಾಡೋದು ಹಂಗಲ್ರೀ... ಹಿಂಗ..." ಎಂದು ನುಡಿದ ಮನಸೂರ "ನೀನೊಲಿದರ ಕೊರಡು



ಕೊನರುವುದಯ್ಯ" ವಚನವನ್ನು ತಾವೇ ಹಾಡಲು ಪ್ರಾರಂಭಿಸಿದರು. "ವಚನಗಳನ್ನು ಹಾಡಲು ಪ್ರಾರಂಭಿಸಿದ ನಂತರ ಮನಸೂರರ ಗಾಯನದಲ್ಲಿ ಸಾಹಿತ್ಯದೊಂದಿಗೆ ಲಾಲಿತ್ಯವೂ ಬೆಳೆಯಿತು." ಬಸವನಾಳ ಮಾಸ್ತರರೂ ಇವರ ವಚನ ಗಾಯನಕ್ಕೆ ಕಾರಣರಾದರು. ಮೃತ್ಯುಂಜಯ ಸ್ವಾಮಿಗಳಂಥವರು ಶರಣರ ವಚನಗಳನ್ನು ತಾವೇ ಸುಮಧುರವಾಗಿ ಹಾಡಿ ಆನಂದಿಸುತ್ತಿದ್ದರು. ಅವರೇ ಮಲ್ಲಿಕಾರ್ಜುನರಿಗೆ ವಚನಗಳನ್ನು ಆರಿಸಿಕೊಟ್ಟು ಹಾಡಲಿಕ್ಕೆ ಅಪ್ಪಣೆ ಮಾಡುತ್ತಿದ್ದರು. ವಚನಗಳನ್ನು ಕಾವ್ಯವಾಚನ ಪದ್ಧತಿಯಲ್ಲಿ ಹೇಳಬೇಕೇ ಅಥವಾ ತಾಳಕ್ಕೆ ಜೋಡಿಸಿ ಹಾಡಬೇಕೇ ಎಂಬ ವಾದ ನಡೆಯುತ್ತಿದ್ದಾಗ ಮಲ್ಲಿಕಾರ್ಜುನರು ಅವುಗಳ ಅರ್ಥಹಾನಿಯಾಗಗೊಡದೆ ರಾಗ - ತಾಳಗಳಲ್ಲಿ ಹಾಡಲಾರಂಭಿಸಿದರು. ಶ್ರೇಷ್ಠ ವಚನಗಳನ್ನು ಓದಿ ಅವುಗಳ ಅರ್ಥವನ್ನು ಅರಿವಾಗಿಸಿಕೊಂಡರು. "ತಿಳಿಯದೇ ಹಾಡಿದ ಹಾಡು ಪ್ರಾಣಹೀನ ಹಾಗೂ ನೀರಸವಾಗಿ ಶ್ರೋತೃಗಳ ಮೇಲೆ ಪ್ರಭಾವವನ್ನು ಬೀರಲಾರದು; ತನ್ನನ್ನು ಕಲಕದೇ ಇದ್ದದ್ದು ಕಲೆಯಲಾಗಲಾರದು" ಎಂಬುದನ್ನು ಅರಿತ ಇವರು ವಚನ ಸಾಹಿತ್ಯವನ್ನು ಆಳವಾಗಿ ವ್ಯಾಸಂಗ ಮಾಡಿದರು.

ಈ ಘಟ್ಟವನ್ನು ಮಲ್ಲಿಕಾರ್ಜುನ ಮನಸೂರರೇ ಸ್ವತಃ ತಮ್ಮ ಆತ್ಮಕಥನ "ನನ್ನ ರಸಯಾತ್ರೆ"ಯಲ್ಲಿ ಮನೋಜ್ಞವಾಗಿ ವಿವರಿಸುತ್ತಾರೆ: "ಅಲ್ಲಮ ಪ್ರಭುದೇವರ ಜ್ಞಾನದ ಪ್ರಖರವಾದ ಜ್ಯೋತಿಯಲ್ಲಿ ನನ್ನ ಕೊಳೆ ಕಲ್ಮಶಗಳು ಸುಡಹತ್ತಿದವು. ನಾನು ಪ್ರಭುದೇವರ ಬೆಟ್ಟಕ್ಕೆ ಚಳಿಯಾದೊಡೆ ಏನು ಹೊದ್ದಿಸುವರಯ್ಯಾ, ಬಿರುಗಾಳಿ ಬೀಸಿ ಮರ ಮುರಿಯುವಂತೆ, ಸುಳುಹು ಸುಳಿಯದೆ ತಂಗಾಳಿ ಪರಿಮಳದೊಡಗೂಡಿ ಸುಳಿವಂತೆ, ಆಚಾರವನರಿಯದೆ, ವಿಭವಳಿಯದೆ, ಕೋಪವಡಗದೆ, ಮುಂತಾದ ವಚನಗಳನ್ನೋದಿ ಮನನ ಮಾಡಿ, ನನ್ನೊಳಗೇ ಹಾಡಿಕೊಳ್ಳುತ್ತಿರುವಾಗ ನನ್ನ ಅಂತರಂಗವು ಭಾವಪುಲಕಿತವಾಗುತ್ತಿತ್ತು. ಬಸವಣ್ಣನವರ ಭಕ್ತಿ ಪರವಶತೆಗೆ ನಾನು ಮರುಳಾದೆ. ಅವರ ವಚನಗಳನ್ನು ನನ್ನ ಮನಸ್ಸಿನ ಒಳಪದರಗಳಲ್ಲಿ

ಹಾಸಿ, ಬೀಸಿ, ನನ್ನನ್ನು ಹಾಗೂ ನನ್ನದನ್ನೆಲ್ಲ ಮರೆತು ಎಷ್ಟೋ ಕಾಲ ಹಾಡಿದ್ದುಂಟು. ಎನ್ನ ಕಾಯವ ದಂಡಿಗೆಯ ಮಾಡಯ್ಯಾ! ಎನ್ನ ಶಿರವ ಸೋರೆಯ ಮಾಡಯ್ಯಾ! ಎನ್ನ ನರವ ತಂತಿಯ ಮಾಡಯ್ಯಾ! ಎನ್ನ ಬೆರಳ ಕಡ್ಡಿಯ ಮಾಡಯ್ಯಾ! ಬತ್ತೀಸರಾಗವ ಹಾಡಯ್ಯ! ಉರದಲೊತ್ತಿ ಬಾರಿಸು ಕೂಡಲ ಸಂಗಮದೇವಾ! ಇಂಥ ಆತ್ಮ ಸಮರ್ಪಣೆ, ಅಹಂಕಾರ ವಿಸರ್ಜನೆಯಿಲ್ಲದೆ ಉತ್ತಮವಾದ ಸಂಗೀತ ಹೊಮ್ಮುವುದು ಅಸಂಭವವೆಂದು ನನಗೆ ಮನದಟ್ಟಾಯಿತು."

"ಬಸವಣ್ಣನವರ ಹಲವಾರು ವಚನಗಳನ್ನು ನಾನು ಹಾಡಿದೆ. 'ವಚನದಲ್ಲಿ ನಾಮಾಮೃತ ತುಂಬಿ' ಈ ವಚನ ಭೀಮಪಲಾಸ ರಾಗದಲ್ಲಿ ತುಂಬಿಕೊಂಡಿತು. 'ನೀನೊಲಿದರೆ ಕೊರಡು ಕೊನರುವುದಯ್ಯಾ!' ಈ ವಚನವು ಇನ್ನೊಮ್ಮೆ ಕಲ್ಯಾಣದಲ್ಲಿ ಅರಳಿತು. 'ಕಳಬೇಡ, ಕೊಲಬೇಡ' ಪಟದೀಪದಲ್ಲಿ ಬೆಳಗಿತು. 'ಅಂದು ಇಂದು ಮತ್ತೊಂದೆನಬೇಡ' ಈ ವಚನ ದುರ್ಗಾರಾಗದಲ್ಲಿ ನಿನದಿಸಿತು. ಹಾಗೆಯೇ ಅಕ್ಕಮಹಾದೇವಿಯವರ ಅಧ್ಯಾತ್ಮ ಶೃಂಗಾರಕ್ಕೆ ನಾನು ಸೋತುಹೋದೆ. 'ಅಳಿ ಸಂಕುಳವೇ, ಮಾಮರವೇ, ಬೆಳುದಿಂಗಳೇ, ಕೋಗಿಲೆಯೇ, ನಿಮ್ಮ ನಿಮ್ಮನೆಲ್ಲರನು ಒಂದು ಬೇಡುವೆನು. ಎನ್ನೊಡೆಯ ಚೆನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದುತೋರಿರೆ! ಸಾವಿಲ್ಲದ ಕೇಡಿಲ್ಲದ ಚೆಲುವಂಗಾನೊಲಿದೆ ಅವ್ವ' ಮುಂತಾದ ಈಕೆಯ ವಚನಗಳನ್ನು ಓದುವಾಗ, ಹಾಡುವಾಗ ನನ್ನ ಆತ್ಮವು ವೈರಾಗ್ಯದ ಸೋಪಾನದಿಂದ ಶ್ರೀಗಿರಿಯನ್ನೇರುತ್ತಿತ್ತು. 'ಅಕ್ಕ ಕೇಳವ್ವಾ ನಾನೊಂದು ಕನಸು ಕಂಡೆ' ಈ ವಚನವನ್ನು ಸಹಾತಿಯಲ್ಲಿ ಎಷ್ಟೋ ಸಲಿ ಮೈಮರೆತು ನಾನು ಹಾಡಿದ್ದುಂಟು. ಸ್ವರಾಂಕಿತಗೊಳಿಸಿದ ವಚನಗಳನ್ನು ಮೃತ್ಯುಂಜಯಪ್ಪ ಗಳ ಮುಂದೆ ಮೊದಲು ನಿವೇದಿಸಿ ಅವರ ಒಪ್ಪಿಗೆಯನ್ನು ಪಡೆಯುತ್ತಿದ್ದೆ. ನಂತರ ಬೇರೆ ಕಡೆಗಳಲ್ಲಿ ಹಾಡುತ್ತಿದ್ದೆ."



ಮಲ್ಲಿಕಾರ್ಜುನ ಮನಸೂರ

"ಶಬ್ದ ಕೆಡದಂತೆ, ವಾಕ್ಯ ಹಾಳಾಗದಂತೆ, ಭಾವ ಮುಕ್ಕಾಗದಂತೆ ವಚನಗಳನ್ನು ಅವರಂತೆ ಯಾರು ಹಾಡಬಲ್ಲರು? ಆ ಭಾವ ಅರಗಿಸಿಕೊಳ್ಳಲಿಕ್ಕೂ ಸಂಸ್ಕಾರ ಬೇಕು, ಮಟ್ಟಬೇಕು" ಎಂದಿರುವವರು ಅವರ ಶಿಷ್ಯ ಸಿದ್ಧರಾಮ ಜಂಬಲದಿನ್ನಿ. ಈ ಶಿಷ್ಯ 1969ರಲ್ಲಿ ತಮ್ಮ ಗುರುಗಳೊಂದಿಗೆ ಶ್ರಾವಣಮಾಸದಲ್ಲಿ ಕೈಗೊಂಡ ಶ್ರೀಶೈಲ ಯಾತ್ರೆಯನ್ನು ನೆನಪಿಸಿಕೊಳ್ಳುತ್ತಾರೆ: "ಮಲ್ಲಿಕಾರ್ಜುನನ ಮೂರ್ತಿಯ ಮುಂದೆ ನಿಂತ ಮನ್ಸೂರರು ಭಕ್ತಿಭಾವದಿಂದ ಕಣ್ಮುಚ್ಚಿ 'ಅಯ್ಯಾ ನಿಮ್ಮ ನಿಜದಂತವನಾರು ಬಲ್ಲಿರಯ್ಯ। ಬರಿ ಎಂಬಾತ ನಿಮ್ಮ ಚರಣವನರಿಯ। ಬ್ರಹ್ಮ ಎಂಬಾತ ನಿಮ್ಮ ಮಕುಟವನರಿಯ। ಶತಕೋಟಿ ರೇವರ್ಕಳು ನಿಮ್ಮ ರೋಮ ಪ್ರಮಾಣವನರಿಯರು। ನಾ ನಿಮ್ಮ ಬಲ್ಲೆನೆ ಅಯ್ಯಾ। ಕಪಿಲ ಸಿದ್ಧ ಮಲ್ಲಿಕಾರ್ಜುನ।' ಎಂದು ಹಾಡಿದಾಗ 800 ವರ್ಷಗಳ ಬಳಿಕ ಅಕ್ಕ ಈ ಗಂಧರ್ವನ ಕಮನೀಯ ಕಂಠದಲ್ಲಿ ಮತ್ತೊಮ್ಮೆ ಹಾಡಿದಳೆನಿಸಿತು" ಎನ್ನುತ್ತಾರೆ.

ಮಲ್ಲಿಕಾರ್ಜುನ ಮನಸೂರರು ಪಹಾಡಿ ರಾಗದಲ್ಲಿ "ಅಕ್ಕ ಕೇಳವ್ವ..." ಹಾಡಿದಾಗ ರಾಷ್ಟ್ರಕವಿ ಕುವೆಂಪು ಅವರೆಂದರು "ಇದನ್ನು ಕೇಳುತ್ತಾ ಕೇಳುತ್ತಾ ನಮ್ಮೆದುರು ಹೊಸ ಹೊಸ ಅರ್ಥಗಳೇ ತೆರೆಯುತ್ತವೆ." ವಚನಗಳನ್ನು ಇಷ್ಟರಮಟ್ಟಿಗೆ ಮೈದುಂಬಿಕೊಂಡ ಮನಸೂರರು 1988ರ ಅಕ್ಟೋಬರ್ 31ರಂದು ದಿವಂಗತ ಪ್ರಧಾನಿ ಇಂದಿರಾಗಾಂಧಿಯವರ ನಾಲ್ಕನೆಯ ಪುಣ್ಯತಿಥಿಯ ಸಂದರ್ಭದಲ್ಲಿ ದಿಲ್ಲಿಯ ಶಕ್ತಿಸ್ಥಲದಲ್ಲಿ ಏರ್ಪಾಡಾಗಿದ್ದ ತಮ್ಮ ಸಂಗೀತ ಕಾರ್ಯಕ್ರಮವನ್ನು "ಅಕ್ಕ ಕೇಳವ್ವ..."ದೊಂದಿಗೇ ಮುಕ್ತಾಯ ಗೊಳಿಸಿದರು; ನೇರಪ್ರಸಾರದಲ್ಲಿ ಅದನ್ನು ದೂರದರ್ಶನದಲ್ಲಿ ಆಲಿಸುತ್ತಿದ್ದ ಸಹಸ್ರಾರು ಕನ್ನಡಿಗರನ್ನು ರೋಮಾಂಚನಗೊಳಿಸಿದರು.

"ಸಂಗೀತದೊಳಗೆ ಒಬ್ಬನ ಮನಸ್ಸು ಕರಗಿಸಿ ಅಂತಃಕರಣ ಹೊರಸೂಸಿ ಹೃದಯ ಪರಿವರ್ತನ ಆಗೋ ಹಂಗಮಾಡುವ ಶಕ್ತಿ ಅದ" ಎಂದು ನಂಬಿದ್ದ ಮಲ್ಲಿಕಾರ್ಜುನ ಮನ್ಸೂರರು ಸಂಗೀತಕ್ಕಾಗಿಯೇ ಇಡೀ ಜೀವನವನ್ನು ಸವೆಸಿದರು. "ಹೊಟ್ಟೆಗೆ ಹಿಟ್ಟು ಅವಶ್ಯಕವಾಗಿರುವಂತೆ ಮನಸ್ಸಿಗೆ ಹೃದಯಕ್ಕೆ ಕಲೆಯು ಅತ್ಯಾವಶ್ಯಕ. ಅದರಲ್ಲಿಯೂ ಸಂಗೀತ ಕಲೆಯು ವ್ಯಕ್ತಿಯ ಹೃದಯಕ್ಕೆ ಸುಸಂಸ್ಕೃತಿಯ ಒಂದು ಮೆರಗನ್ನು ತಂದುಕೊಂಡುತ್ತದೆ. ಹೃದಯ ಶ್ರೀಮಂತಿಕೆಯೇ ನಾಡಿನ, ದೇಶದ ಸಂಸ್ಕೃತಿಯ ಶ್ರೀಮಂತಿಕೆ ಯಾಗಿದೆ. ಆದ್ದರಿಂದ ಸಂಗೀತ ಅಥವಾ ಯಾವುದೇ ಕಲೆಯ ವಿಷಯದಲ್ಲಿ ನಾವು ಅಭಿಮಾನ ತಾಳಿ ಅದರ ಭಾವದಿಂದ, ಭಕ್ತಿಯಿಂದ ಅದನ್ನು ಆರಾಧಿಸಬೇಕು. ಅಲ್ಲಿ ವಂಚನೆಗೆ ಮೋಸಕ್ಕೆ ಕೆಲಮಾತ್ರವೂ ಅವಕಾಶ ಕಲ್ಪಿಸಿಕೊಡಬಾರದು. ಚರಿತ್ರಾರ್ಥವಾಗಿ ಅಲ್ಲಸಲ್ಲದ ರಾಜಕಾರಣ ಮಾಡಿದವರಲ್ಲಿ ಸಂಗೀತ ಕಲೆಯ ಸರ್ವನಾಶವೆಂದೇ ತಿಳಿಯಬೇಕು."

ಮಲ್ಲಿಕಾರ್ಜುನ ಮನ್ಸೂರರು ತಾವೊಬ್ಬ ಮಹಾನ್ ಸಂಗೀತ ಗಾರರೆಂದು ಎಂದು ಬೀಗಲಿಲ್ಲ. ಆದರೆ ಸ್ವಾಭಿಮಾನವನ್ನು ಬಿಟ್ಟುಕೊಡಲಿಲ್ಲ. ಒಮ್ಮೆ ಆಕಾಶವಾಣಿಯವರು ಇತರರಿಗೆ 190 ರೂಪಾಯಿ ಕೊಟ್ಟು ಇವರಿಗೆ 140 ರೂಪಾಯಿ ಕೊಟ್ಟಾಗ ಅದನ್ನು ತಿಳಿದು ನೊಂದ ಮನಸೂರರು ಮುಂದೆ ಹತ್ತು ವರ್ಷಗಳ ಕಾಲ ರೇಡಿಯೋದಲ್ಲಿ ಹಾಡಲೇ ಇಲ್ಲ. ಆರ್ಥಿಕ ಅಡಚಣೆಯಿಂದ ತತ್ತರಿಸಿ ಹೋದರೂ ಅದನ್ನು ಗಣನೆಗೇ ತೆಗೆದುಕೊಳ್ಳಲಿಲ್ಲ. ನಿಲಯದ ನಿರ್ದೇಶಕರೇ ಇವರನ್ನು ಭೇಟಿಯಾಗಿ, "ಮನಸೂರರೇ, ತಮಗೆ ತ್ರಾಸಾದಂತೆ ಕಾಣುತ್ತದೆ. ನಮ್ಮಲ್ಲಿಗೆ ಬಂದು ಒಂದೆರಡು ರೆಕಾರ್ಡಿಂಗುಗಳನ್ನಾದರೂ ಮಾಡಿಸಿರಿ" ಎಂದಾಗ ಇವರು "ನೋಡಿ, ಆನೆಯ ಸಂಗಡ ಒಮ್ಮೆ ಕುಸ್ತಿ ಹಿಡಿದಿದ್ದೀನಿ. ಬಿದ್ದರೂ ಸರಿ, ಎದ್ದರೂ ಸರಿ. ಆದರೆ ನನ್ನ ಬದುಕಿಗಾಗಿ ನರಿಯ ಬಾಲವನ್ನೆಂದೂ ಹಿಡಿಯಲಾರೆ"

ಎಂದು ದಬಾಯಿಸಿ ಕಳಿಸಿಬಿಟ್ಟರು. "ಬೆಳಗಿನ ವೇಳೆಯಲ್ಲಿ ತೋಡಿ ಅಸಾವರಿಯಲ್ಲಿ, ಮಧ್ಯಾಹ್ನ ಸಾರಗಂದ ಗುಂಗಿನಲ್ಲಿ, ಸಾಯಂಕಾಲ ಪೂರಿಯಾ, ಮಾರವಾಗಳ ಪಡಸಾಲೆಯಲ್ಲಿ, ರಾತ್ರಿಯಾಗುತ್ತಲೂ ಯಮನ್, ಭೂಪ, ಭಾಗೇಶ್ರೀಗಳಲ್ಲಿ ಮುಳುಗಿರುತ್ತಿದ್ದ ಮಲ್ಲಿಕಾರ್ಜುನ ಮನಸೂರರು ಅಕ್ಷರಶಃ ಸಂಗೀತದಲ್ಲೇ ತಮ್ಮ ಸಾಕ್ಷಾತ್ಕಾರವನ್ನು ಕಂಡಕೊಂಡರು. "ಹಿಂದೆಲ್ಲ ನನ್ನ ಹೆಸರು ಹಾಕಿ ಚೀಟಿ ಹಂಚಿದ್ದರೆ ಸಾಮಾನ್ಯವಾಗಿ ಬರುವ ಜನವೂ ಬರುತ್ತಿದ್ದಿಲ್ಲ. ಖಾಲಿ ಸಭೆಗಳಿಗೆ ಹಾಡಿ ನನಗೆ ಅಭ್ಯಾಸವಾಗಿದೆ" ಎಂಬ ವಾಸ್ತವವಾದ ಮನಸೂರರು ಕೀರ್ತಿಯ ಪರಾಕಾಷ್ಠೆಯಲ್ಲಿದ್ದ ಅವರನ್ನೊಮ್ಮೆ ಎನ್ಕೆಯವರು ಸಂದರ್ಶಿಸಿದಾಗ "ಖರೇ ಹೇಳ್ರೀ ಎನ್ಕೆ ಅವರ, ನನಗೆ ಈ ಖ್ಯಾತಿ, ಕೀರ್ತಿ, ಪ್ರಸಿದ್ಧಿ, ಏನೂ ಮಾಡೋದಿಲ್ಲ. ಮನುಷ್ಯ ತಾನು ಸಾಧಿಸಬೇಕಾದ್ದನ್ನು ಸಾಧಿಸಿಬಿಟ್ರಾಗ ಕೀರ್ತಿ, ಪ್ರಸಿದ್ಧಿ ಇವೆಲ್ಲ ಗೌಣ ವಿಷಯಗಳಾಗಿ ಬಿಡ್ತಾವ" ಎಂದು ಹೇಳಿ ತಮ್ಮ ಜೀವನಧರ್ಮವನ್ನೇ ಸರಳವಾಗಿ ಸಾರಿಬಿಟ್ಟರು!

ಕಚೇರಿಯಲ್ಲೊಮ್ಮೆ ಇವರ ಗಾಯನದ ಬಗ್ಗೆ ಅಸಹನೆ ತೋರುತ್ತಾ ಕೂತಿದ್ದ ಸಿನಿಕನೊಬ್ಬ ಸೊಲ್ಲೆತ್ತಿದಾಗ ಅವನನ್ನು ಹೀಗೆಳೆಯದೆ "ಒಂದಾದ ನಂತರ ಒಂದರಂತೆ ವೈವಿಧ್ಯಪೂರ್ಣ ಬೇರೆ ಬೇರೆ ಅಂಗಗಳಾದ ಚೀಜ್‌ನ ಅಂತರಾದ ಮುಖವನ್ನೆತ್ತಿಕೊಂಡು ತಾರಕಷ್ತದ ಸಮ್ ನಿರ್ದೇಶಿಸಿ ಸುಸ್ಪಷ್ಟವಾಗಿ ತೋರಿಸಿಕೊಟ್ಟರು." ಮತ್ತೊಮ್ಮೆ ಮುಂಬಯಿ ಆಕಾಶವಾಣಿ ನಿರ್ದೇಶಕರಿಗೆ "ನಿಮ್ಮ ಕೇಂದ್ರದ ತಬಲಜೀ ನಂಗೆ ಸಾಲದು. ಅಲ್ಲಾರಖ್ಖಾನನ್ನೋ, ಮಹಮ್ಮದ ಅಹಮ್ಮದನನ್ನೋ ಕೊಡಿ" ಎಂದರೂ ಕೇಳದೆ ಅವರು ಸಾಮಾನ್ಯ ತಬಲಜೀಯನ್ನೇ ಕೂಡಿಸಿದಾಗ, ಕಾರ್ಯಕ್ರಮ ನೇರ ಪ್ರಸಾರವಾಗುತ್ತಿದ್ದ ಆ ದಿನಗಳಲ್ಲಿ ಸ್ಟುಡಿಯೋದಲ್ಲಿ ಕೂತಿದ್ದ ಇವರು ಕಚೇರಿ ಮಧ್ಯೆ ರೇಗಿ

"ಇಂಥ ತಬಲಜೀಯನ್ನು ಕೊಡುತ್ತೀರಿ. ನಾನೇನು ದಮಡಿ ಬಾರಿಸಲೇ? ಎಂದು ಕೂಗಾಡಿದಾಗ ಸಾವಿರಾರು ಶ್ರೋತೃಗಳು ಇವರ ಅಸಮಾಧಾನದ ನುಡಿಗಳನ್ನು ಕೇಳಿಸಿ ಕೊಂಡಿದ್ದರು. ಕೆಲವೊಮ್ಮೆ ತಬಲಜೀಯಿಂದಲೇ ಇವರ ಕಚೇರಿಗಳು ಹಾಳಾಗಿದ್ದಾಗ ಅತೃಪ್ತಿಯಿಂದ ಮುಖ ಕೆಳಗೆ ಮಾಡಿ ಕೂರುತ್ತಿದ್ದುದುಂಟು."

"ಹಾಡುವುದು ನನ್ನ ಕಾಯಕ ಹಾಡುತ್ತೀನಿ. ಕೇಳುವುದು ಅವರ ಧರ್ಮ ಕೇಳುತ್ತಾರೆ. ಮಿಕ್ಕ ಯಾವುದೂ ಮಹತ್ತ್ವದ್ದಲ್ಲ" ಎಂದ ಮನಸೂರರು ಸಾಂಸಾರಿಕ ಕ್ಷೋಭೆ ಕಚೇರಿ ಹಾಳುಮಾಡಲು ಎಂದೂ ಅವಕಾಶನೀಡಲಿಲ್ಲ. ಭೂಪಾಲ್‌ಗೆ ಒಮ್ಮೆ ಹಾಡಲು ಹೋದಾಗ, ಕಚೇರಿ ಇನ್ನೂ ಅರ್ಧಗಂಟೆ ಮಾತ್ರವಿದೆ ಎಂದಾಗಲೂ ಆಪ್ತರೊಟ್ಟಿಗೆ ಗೋಳುಕರೆ ಹಂಚಿಕೊಳ್ಳುತ್ತಾ ಕೂತಿದ್ದ ಮನಸೂರರು ಹಾಡಿಲಿಕ್ಕೆ ಕೂತಾಗ ಮಾತ್ರ ಒಂದೂವರೆ ಗಂಟೆ ಶಾಸ್ತ್ರೋಕ್ತವಾಗಿ ಹಾಡಿ ಸಭಿಕರಿಗೆಲ್ಲ ದಿವ್ಯ ಪ್ರಸನ್ನತೆಯನ್ನು ಹಂಚಿದ್ದನ್ನು ಅಶೋಕ ವಾಜಪೇಯಿ ನೆನಪಿಸಿಕೊಳ್ಳುತ್ತಾರೆ. "ಜಗತ್ತು ಮನಸೂರರನ್ನು ಅಭಿಜಾತ ವ್ಯಕ್ತಿತ್ವ ಎಂದು ಗುರುತಿಸುವುದೂ ಇದೇ ಕಾರಣಕ್ಕಾಗಿ; ಇಲ್ಲಿದ್ದೂ ಇಲ್ಲಿ ಇರದೆ ಹೋಗಬಲ್ಲ ಆತನ ಗುಣಕ್ಕಾಗಿ" ಎನ್ನುತ್ತಾರೆ. "ಸಂಗೀತವನ್ನು ಎಲ್ಲಕ್ಕಿಂತ ಹಿರಿದಾದ್ದು ಎಂದು ತಿಳಿದು ಅದರ ಅಳತೆಗೆ ತನ್ನ ಬಡಕಲು ಖಾಸಗೀತವನ್ನು ಬಗ್ಗಿಸಿ ಬದಲಿಸಿಬಿಟ್ಟಿದ್ದರು ಮನ್ಸೂರರು. ಕಥ್ಯ ಹಾಗೂ ಶಿಲ್ಪ, ಅನುಭವ ಹಾಗೂ ಮಾಧ್ಯಮಗಳ ನಡುವಿನ ದ್ವಂದ್ವ ಮನಸೂರರಿಗೆ ದ್ವಂದ್ವವೇ ಅಲ್ಲ." "ಮನಸೂರರು ಊರುಗಳಲ್ಲಿ, ಗಲ್ಲಿ, ವಠಾರ ಮನೆಗಳಲ್ಲಿ ಬದುಕುವುದಕ್ಕಿಂತ ಮಿಗಿಲಾಗಿ ಸಂಗೀತದ ಗುಂಗಿನಲ್ಲೇ ಬದುಕಿಬಿಟ್ಟರು." ಮನಸೂರರು ಮನಸ್ಸು ಒಪ್ಪಿದಾಗ ಬಿಟ್ಟಿ ಹಾಡುತ್ತಿದ್ದರು. ಐನೂರು ರೂಪಾಯಿಗೇ ಕಚೇರಿಯನ್ನು ಒಪ್ಪಿಕೊಳ್ಳುತ್ತಿದ್ದರು. ಆದರೆ ಕೆಲವೊಮ್ಮೆ ಸಂಭಾವನೆಯ ವಿಷಯದಲ್ಲಿ ಸಂಧಾನ ಮಾಡಲು ಪ್ರಯತ್ನಿಸಿದವರಿಗೆ

ಛೀಮಾರಿ ಹಾಕಿ ಅವಮಾನ ಮಾಡಿಯೂ ಕಳಿಸುತ್ತಿದ್ದರು. "ವಿದ್ಯೆಯ ವಿಷಯದಲ್ಲಿ ಜಿಪುಣರಾಗಿ ಕಂಡು ಯಾರಿಗೂ ಕೈ ಬಿಟ್ಟುಕೊಡುವವರಲ್ಲ" ಎನ್ನಿಸಿದರೂ ನೇರವಾಗಿ ಕೇಳಿದಾಗ ಚೀಜ್‌ನ ಅಂತರಾ ಹೇಳದೆ ನುಸುಳಿಕೊಳ್ಳುತ್ತಿದ್ದ ಮನಸೂರರು, ಉಪಾಯವಾಗಿ ಕೆಣಕಿದಾಗ ಹಲವಾರು ಚೀಜ್‌ಗಳನ್ನು ಇಡಿದಾಗಿ ಅಸ್ತಾಯಿ ಅಂತರಾ ಸಮೇತ ಹಾಕಿ ಹಾಡಿಸಿ ತಮಗೆ ಗಟ್ಟಿ ಮಾಡಿಸಿದ್ದನ್ನು ವಸಂತ ಕವಲಿ ವಿವರಿಸಿದ್ದಾರೆ.

ಮಲ್ಲಿಕಾರ್ಜುನ ಮನಸೂರರು ಹಲವಾರು ಶಿಷ್ಯರನ್ನು–ಸಿದ್ಧರಾಮ ಜಂಬಲದಿನ್ನಿ, ಪಂಚಾಕ್ಷರಿಮತ್ತಿಗಟ್ಟಿ, ಭಿರ್ಡೀಕರ – ಇವರನ್ನೊಳಗೊಂಡಂತೆ – ಸಂಗೀತ ಜಗತ್ತಿಗೆ ನೀಡಿದರು. ಸಂಗೀತಗಾರರ ಗೌರವಕ್ಕಾಗಿ ದುಡಿದರು. 1960ರಿಂದ 1969ರವರೆಗೆ ಕೇವಲ 500 ರೂಪಾಯಿ ವೇತನ ಪಡೆದು ಆಕಾಶವಾಣಿ ಸಲಹೆಗಾರರಾಗಿ ಧಾರವಾಡ, ಪುಣೆ, ಹೈದರಾಬಾದ್, ಬೆಂಗಳೂರು ಆಕಾಶವಾಣಿ ಕೇಂದ್ರಗಳ ಸಂಗೀತ ಕಾರ್ಯಕ್ರಮಗಳನ್ನು ಕುರಿತು ವರದಿ ಸಲ್ಲಿಸಬೇಕಾದಾಗ ಯಾವ ಕಲಾವಿದರ ಬಗ್ಗೆಯೂ ಅಹಿತವಾದದ್ದನ್ನು ದಾಖಲು ಮಾಡದೆ, ಅವರಲ್ಲಿರುವ ಕುಂದುಕೊರತೆಗಳನ್ನು ಕುರಿತು ಅವರಿಗೇ ವೈಯುಕ್ತಿಕವಾಗಿ ಬರೆದು ತಿಳಿಸಿದರು. ಆಕಾಶವಾಣಿ ಧ್ವನಿಪರೀಕ್ಷೆ ವ್ಯವಸ್ಥೆ ಅಸಮಂಜಸ ಎನ್ನಿಸಿದಾಗ ಸಹ ಕಲಾವಿದರನ್ನು ಸಂಘಟಿಸಿ ವಿರೋಧ ಪ್ರಕಟಿಸಿದರು. ಇದಕ್ಕಾಗಿ ಗಂಗೂಬಾಯಿ ಹಾನಗಲ್ ಮುಂತಾದ ಪ್ರಸಿದ್ಧ ಗಾಯಕರೂ ಇವರ ಬಗ್ಗೆ ತಮ್ಮ ಮೆಚ್ಚಿಗೆ ವ್ಯಕ್ತಪಡಿಸಿರುವುದುಂಟು.

## ಸರಳತೆಯ ಸಾಕಾರ

ಸಂಗೀತದಿಂದ ದೇಶದ ರಸಿಕರನ್ನೆಲ್ಲ ಬೆರಗಾಗಿಸಿದ ಮಲ್ಲಿಕಾರ್ಜುನ ಮನಸೂರರು ತಮ್ಮ ತೌರೂರಾದ ಧಾರವಾಡಕ್ಕೆ ಪರ್ಯಾಯವೆನ್ನಿಸಿದ್ದರು.

ಉತ್ತರ ಭಾರತದ ಸಂಸತ್ ಸದಸ್ಯರೊಬ್ಬರು ದೆಹಲಿಯಲ್ಲೊಮ್ಮೆ "ಧಾರವಾಡವೇ, ಅದೆಲ್ಲಿದೆ?" ಎಂದು ಪಾಟೀಲ ಪುಟ್ಟಪ್ಪನವರನ್ನು ಪ್ರಶ್ನಿಸುತ್ತಾ ಇದ್ದದ್ದನ್ನು ಗಮನಿಸಿದ ಆಗಿನ ಕೇಂದ್ರ ವಾರ್ತಾ ಸಚಿವ ಬಿ. ವಿ. ಕೇಸ್ಕರ್ ತಾವೇ ಉತ್ತರಿಸಿದ್ದರು : "ಅರೆ ಭೈಯ್ಯಾ, ಧಾರವಾಡ ಮಹಾಗಾಯಕ ಮಲ್ಲಿಕಾರ್ಜುನ ಮನಸೂರ ಅವರ ಊರು, ಇದೂ ಗೊತ್ತಿಲ್ಲವೇ?" ಎಸ್. ಶೆಟ್ಟರ್ ದೆಹಲಿಯಲ್ಲಿ ಲಲಿತಕಲಾ ಅಕಾಡೆಮಿಯ ಮಾಜಿ ಅಧ್ಯಕ್ಷ ಹಾಗೂ ಕಲಾ ಇತಿಹಾಸಕಾರ ಕಾರ್ಲ್ ಖಂಡೇಲವಾಲಾ ಅವರನ್ನು ಧಾರವಾಡಕ್ಕೆ ಆಹ್ವಾನಿಸಿದಾಗ ಅವರು ಉತ್ಸುಕತೆಯಿಂದ ಹೇಳಿದ್ದು: "ನಾನು ಅಲ್ಲಿಗೆ ಬಂದರೆ ಮಲ್ಲಿಕಾರ್ಜುನ ಮನ್ಸೂರ ಅವರನ್ನು ಭೆಟ್ಟಿ ಮಾಡಿಸುವಿರಾ?". ಎಂ.ಎಂ. ಕಲಬುರ್ಗಿಯವರು ಇಂಗ್ಲೆಂಡಿಗೆ ಹೋಗಿದ್ದಾಗಲೊಮ್ಮೆ ಅಲ್ಲಿನ ಗ್ರಂಥಾಲಯವೊಂದರ ಮುಖ್ಯಸ್ಥರಾಗಿದ್ದ ಕ್ಯಾಫ್ "ನೀವು ಧಾರವಾಢದವರೆಂದ ಮೇಲೆ ಮಲ್ಲಿಕಾರ್ಜುನ ಮನಸೂರ ಗೊತ್ತಿರಲೇಬೇಕಲ್ಲ. ನಂಗೆ ಅವರ ಗಾಯನ ತುಂಬಾ ಇಷ್ಟ" ಎಂದಿದ್ದರು.

ಇಂಥ ಮಲ್ಲಿಕಾರ್ಜುನ ಮನಸೂರರು ಖಾಸಗಿ ಬದುಕಿನಲ್ಲಿ ಮಾತ್ರ ಸರಳ ವ್ಯಕ್ತಿ. ಅತ್ಯಂತ ಸ್ನೇಹಪರ. ಪತಿಯಾಗಿ, ತಂದೆಯಾಗಿ, ಸಂಸಾರದಲ್ಲಿ ನೆಮ್ಮದಿ ಕಂಡುಕೊಂಡಿದ್ದರು. ದೈವಾರಾಧನೆಯಲ್ಲೇ ಮೈಮರೆಯುತ್ತಿದ್ದಂಥ ಮಹಾನ್ ಭಕ್ತ. ಅ. ನ. ಕೃಷ್ಣರಾಯರು ತಮ್ಮ "ಬರಹಗಾರನ ಬದುಕು" ಪುಸ್ತಕದಲ್ಲಿ ಮನ್ಸೂರರನ್ನು ತಾವು ಮೊಟ್ಟ ಮೊದಲು ಭೇಟಿಯಾದ್ದನ್ನು ಕುರಿತು ಬರೆಯುತ್ತಾರೆ : "ಆಗ ಅವರು ಧರಿಸಿದ್ದುದು ಕೇಸರಿ ಬಣ್ಣದ ಜರತಾರಿ ಪಟಕಾ, ಸರ್ಜ್‌ಕೋಟ್, ಬಣ್ಣಬಣ್ಣದ ಪಾಯಿಜಾಮಾ. ಇವರನ್ನು ಸಂಗೀತ ವಿದ್ವಾಂಸರೆನ್ನುವುದಕ್ಕಿಂತ ಸರ್ಕಸ್‌ನ ಬಫೂನ್ ಎನ್ನಬಹುದಾಗಿತ್ತು." "ಮಿಕ್ಕ ಅನೇಕ ಸಂಗೀತಗಾರರಂತೆ ಬಾಹ್ಯಾಡಂಬರ ಮಾಡದೆ ತನ್ನ ಪಾಡಿಗೆ ಸಂಗೀತ ಹಾಡಿ, ಅಷ್ಟೇ ಸಹಜವಾಗಿ ಪಕ್ಕಕ್ಕೆ ಸರಿದು ಬೀಡಿ ಸೇದುತ್ತಿದ್ದ

ಮನ್ಸೂರರಿಗೆ ಕಡೆಯವರೆಗೂ ಧಾರವಾಡದ ಅಕ್ಕಪಕ್ಕದ ಅಮಾಯಕ ರೈತನ ರೂಪ ಉಳಿದುಬಂದಿತ್ತು..." ಮನ್ಸೂರರು ಎಷ್ಟೇ ಕೀರ್ತಿವಂತರಾದರೂ ಕೌಟುಂಬಿಕ ಪರಿಸರದಲ್ಲಿ ಸಾಮಾನ್ಯವಾಗಿ ಬಾಳಿದರು. ಇವರು ವೃತ್ತಿಯನ್ನು ಪ್ರಾರಂಭಿಸಿದಾಗ ಇವರಿಗೆಂದೂ ದೊಡ್ಡ ರಕಮು ದೊರೆಯಲಿಲ್ಲ. ಬದುಕಿನ ಕೊನೆಯ ಒಂದೆರಡು ದಶಕಗಳನ್ನು ಬಿಟ್ಟರೆ ಆರ್ಥಿಕ ಅಡಚಣೆ ಇವರ ಬೆನ್ನಿಗೆ ಸತತವಾಗಿ ಅಂಟಿತ್ತು. ಆದರೂ "ಮನ್ಸೂರರಿಗೆ ತನ್ನ ಕಾಲದ ಬಗ್ಗೆ ಯಾವ ದೂರೂ ಇದ್ದಿದ್ದಿಲ್ಲ."

ಮಲ್ಲಿಕಾರ್ಜುನರದ್ದು ದೊಡ್ಡ ಕುಟುಂಬ, ಲಕ್ಷ್ಮೀ, ನೀಲಾಂಬಿಕಾ, ಕಸ್ತೂರಿ, ಉಮಾ, ಅನ್ನಪೂರ್ಣ, ಅಕ್ಕಮಹಾದೇವಿ, ಗಿರಿಜಾ-ಸಪ್ತಸ್ವರಗಳಂತೆಯೇ ಏಳು ಹೆಣ್ಣುಮಕ್ಕಳು. ಒಬ್ಬರೇ ಮಗ ರಾಜಶೇಖರ- (ಪ್ರಸಿದ್ಧ ಸಂಗೀತಗಾರರು) 1945–47ರಲ್ಲಿ "ಸುಭದ್ರಾ", "ಚಂದ್ರಹಾಸ" ಇಂತ ಕನ್ನಡ ಚಲನಚಿತ್ರಗಳ ಸಂಗೀತ ನಿರ್ದೇಶಕರಾಗಿದ್ದರೂ ಮನಸೂರರು ಅದರಿಂದಲೂ ದುಡ್ಡು ಮಾಡಲಿಲ್ಲ. ಇವರು ತಾಲೀಮು ಹಾಗೂ ಕಾರ್ಯಕ್ರಮಗಳಿಗಾಗಿ ಊರು ಸುತ್ತುತ್ತಾ ಇದ್ದಾಗ ಸಂಸಾರವನ್ನು ಕಷ್ಟದಿಂದಲೇ ನಿಭಾಯಿಸಿದವರು ಇವರ ಪತ್ನಿ ಗಂಗಮ್ಮ. ನೆರೆಯವರೊಬ್ಬರು ಒಮ್ಮೆ ಗಂಗಮ್ಮನವರನ್ನು ಕೇಳಿದರಂತೆ : "ಏನ್ರೀ, ನಿಮ್ಮ ಮನೆಯವರು ಕಾರ್ಯಕ್ರಮ ಸ್ವೀಕರಿಸುವುದಿಲ್ಲವಂತೆ? ಆಕಾಶವಾಣಿಯವರು ಪ್ರತಿ ತಿಂಗಳು ಇವರ ಗಾಯನ ಪ್ರಸಾರ ಮಾಡಬೇಕೆಂದರೂ ಬೇಡವೆನ್ನುತ್ತಾರಂತೆ. ಇದು ಸರಿಯೇ? ನೀವು ನಿಮ್ಮ ಪತಿಯನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು. ಮತ್ತು ಕಾರ್ಯಕ್ರಮಕ್ಕೆ ಒಪ್ಪಿಸಬೇಕು. ಅಂದಾಗ ಮಾತ್ರ ನಿಮ್ಮ ದೊಡ್ಡ ಕುಟುಂಬ ಸಲಹಬಲ್ಲಿರಿ. ನೀವು ಹೀಗೆ ಕಷ್ಟಪಡುವುದನ್ನು ನೋಡಲಾರೆನವ್ವಾ" ಅಂತ. ಗಂಗಮ್ಮ ಅದಕ್ಕೆ ಉತ್ತರಿಸಿದರಂತೆ: "ಕಾರ್ಯಕ್ರಮ ಸ್ವೀಕರಿಸುವುದು ಬಿಡುವುದು ಅವರಿಗೆ ಬಿಟ್ಟದ್ದು. ಅದರಲ್ಲಿ ನನಗೇನು

ತಿಳಿದೀತು? ಅವರು ಕಾರ್ಯಕ್ರಮಕ್ಕೆ ಹೋಗಲಿ, ಬಿಡಲಿ, ತಂಬೂರಿ ತೆಗೆದುಕೊಂಡು ದಿನಾಲು 7–8 ತಾಸು ಹಾಡುತ್ತಾರಲ್ಲ. ಅದರಿಂದ ನಮಗೆ ಸಂತುಷ್ಟಿಯುಂಟು. ದುಡ್ಡೇನು, ಇಂದಿಲ್ಲ ನಾಳೆ ಬಂದೇ ಬರುತ್ತದೆ."

ಮನಸೂರರ ಮಗಳು ಲಕ್ಷ್ಮೀಪಾಟೀಲ್ ತಮ್ಮ ತಾಯಿಯ ಬಗ್ಗೆ, ತಮ್ಮ ಬಾಲ್ಯದ ಬಗ್ಗೆ ಮನಕರಗುವಂತೆ ಹೇಳುತ್ತಾರೆ : "ಓರ್ವ ಕಲಾವಿದನು ಕಲೆಗೋಸ್ಕರ ತಪಸ್ಸು ನಡೆಸಿದಾಗ ಆತನ ಹೆಂಡತಿಯಾಗುವವಳು ಎಲ್ಲ ದೃಷ್ಟಿಯಿಂದ ಆತನ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ಆತನಿಗೆ ಸಹಕರಿಸಿದಾಗ ಮಾತ್ರ ಆತನ ತಪಸ್ಸು ಸಿದ್ಧಿಸುವುದು. ಈ ದೃಷ್ಟಿಯಿಂದ ನಮ್ಮ ತಾಯಿಯು ನಮ್ಮ ತಂದೆಯವರನ್ನು ಅನುಸರಿಸಿದರು. ನಮಗೆ ಬಂದ ಕಷ್ಟಕಾರ್ಪಣ್ಯಗಳ ಕಹಿ ಅನುಭವಗಳನ್ನು ನಾನು ಅನುಭವಿಸಿ ಅರಿತಿದ್ದೇನೆ. ನಮಗೆ ಎಂಥಾ ಕಷ್ಟಗಳು ಬಂದಾಗಲೂ ಅವುಗಳನ್ನು ನಮ್ಮ ತಂದೆಯವರ ಎದುರಿಗೆ ಹಾಕದೆ, ಧೀರತನದಿಂದ ಧೈರ್ಯವಾಗಿ ಎದುರಿಸಿ ಎಲ್ಲವನ್ನೂ ಸಮಾಧಾನದಿಂದ ನಿಭಾಯಿಸಿಕೊಂಡು ಬಂದಿದ್ದಾಳೆ. ಅಂತೆಯೇ ನಮ್ಮ ತಂದೆಯವರಿಗೆ ಸಂಸಾರದ ಲವಲೇಶವೂ ಇಲ್ಲದೆ ತಮ್ಮ ಸಂಗೀತ ತಪಸ್ಸಾಧನೆಯಲ್ಲಿ ಸಫಲತೆಯನ್ನು ಹೊಂದಿ ಇಂದು ಅವರು ಸಂಗೀತದಲ್ಲಿ ಸಿದ್ಧಪುರುಷರಾಗಿದ್ದಾರೆ." ಲಕ್ಷ್ಮೀಪಾಟೀಲ್ ಹಿರಿಯ ಮಗಳಾಗಿ ತಂದೆಯ ಅಕ್ಕರೆಯನ್ನು ಸವಿದವರು. ರಾತ್ರಿ ಸರಿ ಹೊತ್ತಿನಲ್ಲಿ ಮನೆಗೆ ಹಿಂತಿರುಗುತ್ತಿದ್ದ ತಂದೆಯವರು ತಮ್ಮ ಜತೆ ಕೂತು "ಸುಡುಸುಡುವ ಖಿಚಡಿ, ಬಿಸಿ ಬಿಸಿಯಾದ ಉಳ್ಳೇಗಡ್ಡಿ ರಸಭಾಜಿ ಮತ್ತು ತಾವು ಮನೆಗೆ ಬರುವಾಗ ಕಟ್ಟಿಸಿಕೊಂಡು ಬಂದಿರುತ್ತಿದ್ದ ತಾಜಾ ಕಾಂಭಾಭಜಿ ಇವಕ್ಕೆ ಕಾಸಿದ ತುಪ್ಪ" ಹಾಕಿಸಿಕೊಂಡು ತಮ್ಮ ತಾಟಿನಲ್ಲೇ ಉಣ್ಣುತ್ತಿದ್ದ ತಂದೆಯನ್ನು ಮಮತೆಯಿಂದ ನೋಡುತ್ತಾರೆ. ಲಕ್ಷ್ಮೀ ತಮ್ಮ ತಂದೆ ತಾಲೀಮು ಹೊರಡುವ ಸಂದರ್ಭಗಳಲ್ಲಿ ತಮ್ಮನ್ನು ಬಂಧುಗಳ ಮನೆಗಳಲ್ಲಿ ಬಿಟ್ಟಿರುತ್ತಿದ್ದಾಗ ತಾವು ಅನುಭವಿಸಿದ ಅಹಿತಕರ ಘಟನೆಗಳನ್ನೂ ತಿಳಿಸುತ್ತಾರೆ.

ಮನಸೂರರ ಮಗುವಿನಂಥ ಸ್ವಭಾವವನ್ನು ಕುರಿತು ಹೇಳುವ ಲೇಖಕಿ ದಿವಂಗತ ಗೀತಾ ಕುಲಕರ್ಣಿಯವರದ್ದು ಮತ್ತೊಂದು ಅನುಭವ. ಶಿವರಾಮ ಕಾರಂತರು ಒಮ್ಮೆ ಮುಂಬಯಿ ಮಾರ್ಗವಾಗಿ ಧಾರವಾಡದಲ್ಲಿ ತಂಗಿದ್ದಾಗ ಅವರು ತಮ್ಮ ಸಂಗೀತವನ್ನು ಕೇಳಲು ಅಪೇಕ್ಷಿಸಿದ್ದಾರೆ ಎಂಬ ಸುದ್ದಿ ತಮಗೆ ತಲಪದೆ ಕಾರಂತರಿಗೆ ನಿರಾಸೆಯಾದದ್ದು ಮನಸೂರರಿಗೆ ತಡವಾಗಿ ತಿಳಿಯುತ್ತದೆ. ಕಾರಂತರಂಥ ಗಣ್ಯವ್ಯಕ್ತಿಗೆ ತಮ್ಮಿಂದ ಅಪಚಾರವಾಯಿತು ಎಂದು ಭಾವಿಸಿ ಮನಸೂರರು ತುಂಬಾ ನೊಂದುಕೊಳ್ಳುತ್ತಾರೆ. ಇಷ್ಟೇ ಅಲ್ಲ ಮನಸೂರರಿಗೆ ಸುದ್ದಿ ತಲುಪಿಲ್ಲದ ಕಾರಣದಿಂದ ಮಾತ್ರ ತಮ್ಮ ಭಾವ ಕಾರಂತರಿಗೆ ಅವರ ಸಂಗೀತ ಕೇಳಲಾಗಲಿಲ್ಲ ಎಂಬುದನ್ನು ಅರಿಯದಿದ್ದ ಗೀತಾ, ಮನಸೂರರನ್ನು ವ್ಯಂಗ್ಯವಾಗಿ ಮಾತನಾಡಿಸಿದಾಗಲೂ ಮನ್ಸೂರರು ತಾಳ್ಮೆ ಕಳೆದುಕೊಳ್ಳದೆ ಸಂಯಮದಿಂದ ವರ್ತಿಸುತ್ತಾರೆ. ತಾವು ದೇಶದಲ್ಲೇ ಪ್ರಸಿದ್ಧ ವ್ಯಕ್ತಿ ಎಂಬುದನ್ನು ಮರೆತವರಂತೆ ಮನ್ಸೂರರು ಗೀತಾ ಕುಲಕರ್ಣಿಯವರ ಮನೆಗೆ ತಾವೇ ಹೋಗಿ : "ನನ್ನ ಮಾತು ನಡೆಸಿ ಕೊಡು ಗೀತಮ್ಮ. ನಾಳೆ ನಾನು ಕಾರಂತರಿಗಾಗಿ ಒಂದೇಕೆ – ನಾಲ್ಕು ಗಂಟೆ ಹಾಡ್ತೇನೆ. ಬೆಳಗ್ಗೆ ನಾನೇ ಬಂದು ಆಮಂತ್ರಣ ಕೊಟ್ಟು ನನ್ನಿಂದಾದ ನೋವು ಕ್ಷಮಿಸಲು ಹೇಳ್ತೀನಿ" ಅಂತ ಸಾಮಾನ್ಯ ವ್ಯಕ್ತಿಯಂತೆ ಬೇಡಿದ್ದನ್ನು ಗೀತಾ ತಿಳಿಸುತ್ತಾರೆ.

ಐದು ದಶಕಗಳವರೆಗೆ ಅವರ ನಿಕಟ ಮಿತ್ರರಾಗಿದ್ದಂಥ ಪು.ಲ. ದೇಶಪಾಂಡೆಯವರಿಗಂತೂ "ಮೊದಲ ಭೆಟ್ಟಿಯಲ್ಲೂ, ಎಷ್ಟೋ ವರ್ಷಗಳ ನಂತರ ಮರುಭೆಟ್ಟಿಯಾದಂತೆ ಸ್ನೇಹವನ್ನು ಸೂಸುವ ರಸಿಕ" ಮನಸೂರರನ್ನು ಕಾಣುವುದೇ ಸುದೈವ.

## ದೈವಭಕ್ತ – ಗುರುಭಕ್ತ

ಮನಸೂರರ ದೈವಭಕ್ತಿ, ಗುರುಭಕ್ತಿ ಅಸಾದೃಶ. ಧಾರವಾಡದ ಮುರುಘಾಮಠದ ಮೃತ್ಯುಂಜಯ ಸ್ವಾಮಿಗಳಂತೂ ಇವರಿಗೆ ದೈವ

ಸಮಾನರು. 1976ರಲ್ಲಿ ಆಸ್ಪತ್ರೆ ಯೊಂದರಲ್ಲಿ ಮನ್ಸೂರರು ದಾಖಲೆ ಯಾಗಿದ್ದಾಗ ಸ್ವಾಮಿಗಳ ಆದೇಶದಂತೆ ಪ್ರತಿ ಶಿವರಾತ್ರಿಯಂದೂ ಶಿವಯೋಗ ಗಳಿಗೆ ಸಲ್ಲಿಸಲಾಗುತ್ತಿದ್ದ ಸಂಗೀತ ಸೇವೆ ತಪ್ಪುವ ಸಂದರ್ಭ ಒದಗುತ್ತದೆ. ಮನಸೂರರು ಆಸ್ಪತ್ರೆ ಕೋಣೆಯಲ್ಲೇ ಯೋಗಿಗಳ ಭಾವಚಿತ್ರವನ್ನು ಇರಿಸಿ ತಮ್ಮ ದೇಹಶ್ರಮವನ್ನೂ ಮರೆತು ತದೇಕಚಿತ್ತ ರಾಗಿ ಐದು ವಚನಗಳನ್ನು ಹಾಡಿ ಮನಸ್ಸಿಗೆ ಶಾಂತಿಯನ್ನು ತಂದು ಕೊಳ್ಳುತ್ತಾರೆ. ನಿಧನರಾಗುವ 25 ದಿನಗಳಿಗೂ ಮೊದಲು ಆಗಸ್ಟ್ 17, 1992ರಂದು ಶ್ರಾವಣ ಮಾಸದ ಮೂರನೆಯ ಸೋಮವಾರ ಸಂಗೀತ ಸೇವೆಯನ್ನು ತಪ್ಪಿಸಬಾರದೆಂದು ಮುರುಘಾಮಠದಲ್ಲಿ 15 ನಿಮಿಷಗಳ ಕಾಲ ಹೇಮ ನಾಟ ರಾಗ ಹಾಗೂ ವಚನವನ್ನು ಹಾಡುತ್ತಾರೆ. ಸ್ವಾಮಿಗಳ ಪವಿತ್ರ ಸ್ವರಣಾರ್ಥವಾಗಿ ಮನಸೂರರು ತಮ್ಮ ಮನೆಗೆ ಇಟ್ಟಿರುವ ಹೆಸರು "ಶ್ರೀಮೃತ್ಯುಂಜಯ". ಹಾವೇರಿ, ಮುರುಗೋಡದ ಮಠಾಧೀಶರೂ ಮನಸೂರರ ಹಿತಚಿಂತಕರು.

ಧಾರವಾಡದ ದೇಸಾಯಿ ಕಾಂಪೌಂಡ್‌ನಲ್ಲಿದ್ದ ಮನಸೂರರ ಮನೆಗೆ ಶಿಷ್ಯವೃತ್ತಿಗಾಗಿ ಭೇಟಿ ನೀಡುತ್ತಿದ್ದ ಸಿದ್ಧರಾಮ ಜಂಬಲದಿನ್ನಿ ಘಟನೆ ಯೊಂದನ್ನು ಸ್ವಾರಸ್ಯವಾಗಿ ನಿರೂಪಿಸುತ್ತಾರೆ: "ಸಂಗೀತಪಾಠದ ಮಧ್ಯೆ ನನಗೆ ಮನ್ಸೂರರ ಹೆಣ್ಣುಮಕ್ಕಳಿನ್ನೂ ಚಿಕ್ಕವರಾಗಿದ್ದಾಗ ಬೀದಿಯಲ್ಲಿದ್ದ ನಲ್ಲಿಯಿಂದ ಅವರು ನೀರನ್ನು ಹೊತ್ತು ತರುತ್ತಿದ್ದುದು ಕಂಡಿತು. ನಾನು ನನ್ನ ಅಭ್ಯಾಸವನ್ನು ಅಷ್ಟಕ್ಕೇ ನಿಲ್ಲಿಸಿ ಸೋದರಿಯ ರೊಡಗೂಡಿ ನೀರು



ತರಲು ಹೋದೆನು. ಇತ್ತ ಗುರುಗಳು ತಾವೇ ತಂಬೂರಿ ತೆಗೆದುಕೊಂಡು ಅದೇ ಹಿಂದೋಲ್ ರಾಗದ ವಿಸ್ತಾರ, ಅಲಾಪನೆ, ವಿವಿಧ ಮುಖಗಳ ಕಲ್ಪನೆ ಮಾಡಿ ಸಾಧನೆ ಮಾಡುತ್ತಿದುದ್ದನ್ನು ನೋಡಿ ಕಣ್ಣು ತೇವಗೊಂಡವು. ಸುತ್ತಲಿನ ವಾತಾವರಣವೆಲ್ಲ ಅವರ ನಾದದಿಂದ ತುಂಬಿತ್ತು. ಆ ಸ್ವರಗಳು ನನ್ನ ಕಿವಿಯ ಮೇಲೆ ಬೀಳುತ್ತಿದ್ದಂತೆ ನಾನು ಆನಂದ ಪುಲಕಿತನಾದೆ. ಗುರುಗಳ ಆಗಿನ ಆ ಚಿತ್ರ ಇನ್ನೂ ನನ್ನ ಮುಂದೆ ಕಟ್ಟಿದೆ. ಹಣೆಗೆ ಹಚ್ಚಿದ ವಿಭೂತಿ! ಮೊಣಕಾಲೂರಿ ತಂಬೂರಿ ಹಿಡಿದು ಶಿವನನ್ನು ಸಾಕ್ಷಾತ್ಕರಿಸಿ ಕೊಳ್ಳಲೆಂದು ಮೇರುಪರ್ವತದಡಿಗೆ ಕುಳಿತು ತಪಸ್ಸು ನಡೆಸಿದ ಶಿವಭಕ್ತ ರಾವಣನಂತೆ ಕಾಣುತ್ತಿದ್ದರು. ತುಂಬಿ ಸೂಸುತ್ತಿದ್ದ ಆ ನಾದ ಪ್ರವಾಹ ಕಾಂಪೌಂಡಿನ ಆವರಣವನ್ನೆಲ್ಲ ವ್ಯಾಪಿಸಿತ್ತು....."

ಸಿದ್ಧರಾಮ ಜಂಬಲದಿನ್ನಿ ಮನ್ಸೂರರನ್ನು ಹತ್ತಿರದಿಂದ ಬಲ್ಲವರು, ಅವರ ಸ್ವಭಾವ ಗುಣಗಳನ್ನು ವಿಮರ್ಶಿಸಬಲ್ಲ ಪಟ್ಟ ಶಿಷ್ಯರಲ್ಲಿ ಒಬ್ಬರು. ಮನಸೂರರ ಮಠಗಳ ಬಗೆಗಿನ ಆಸಕ್ತಿ, ದೈವಭಕ್ತಿ ಇದನ್ನು ಕುರಿತು ಯಾರಾದರೂ ಪ್ರಶ್ನಿಸಿದಾಗ ಅವರೆನ್ನುತ್ತಾರೆ: "ಮನಸೂರರ ಭಕ್ತಿಗೆ ನೂರು ವಿವೇಕದ ಕಣ್ಣುಗಳು, ಏನೇ ಆಗಲಿ ಅರಿದರಿದು ನೋಡಿಯೇ ಅವರು ಸ್ವೀಕರಿಸುವರು. ಅವರು ಭಾವುಕರು ನಿಜ. ಆದರ ಅಭಾವಕ್ಕೆ ನೂರು ಬೆಳಕಿನ ಕಿಟಕಿಗಳಿವೆ. ಸ್ವಂತ ವಿಚಾರ, ವಿಮರ್ಶೆ ಅಳೆದು ನೋಡುವುದು ಅವರ ಸಂಪತ್ತು." "ಅವರು ಮೊದಲು ಕಲ್ಯಾಣಕ್ಕೆ ಹೋದಾಗ ಆ ನೆಲದಲ್ಲಿ ಹೇಗೆ ಕಾಲಿಡಬೇಕು ಅನ್ನಿಸಿತಂತೆ. ಇಲ್ಲಿ ಅಲ್ಲಿ ಕಡೆ ಶರಣರ ಪಾದಗಳ ಹೆಜ್ಜೆಗಳಿವೆ. ಹೇಗೆ ನಡೆಯಲಿ ಎಂದು ಚಿಂತೆ ಗೊಳಗಾದರಂತೆ, ಭಕ್ತಿ ಮೈದೂರಿ ಆ ನೆಲದಲ್ಲಿ ಬಿದ್ದು ಉರಾಳಾಡಿದರಂತೆ." ಗುರುಗಳ ಇಂಥ ಭಾವಪರವಶತೆಯನ್ನು ವಿವರಿಸಬಲ್ಲರು ಜಂಬದಿನ್ನಿ. ಇವರು ಗುರುಗಳೊಂದಿಗೆ ಶ್ರೀ ಶೈಲ ಯಾತ್ರೆಯನ್ನೂ ಮಾಡಿದರು. ಅವರು ಅಲ್ಲಿ ಹಾಡಿದ್ದನ್ನು ಕೇಳಿದರು. "ತಂಬೂರಿ ಇಲ್ಲ, ವೀಣೆ ಇಲ್ಲ, ತಬಲ ಇಲ್ಲ.

ಆದರೆ ಎಲ್ಲವೂ ಇತ್ತು ಇರಬೇಕಾದ ಭಕ್ತಿ, ವಿನಯ, ಬೇರೆ ಶಕ್ತಿ, ಕಲೆ, ಭಾವ ಇದ್ದವು."

ಮಲ್ಲಿಕಾರ್ಜುನ ಮನಸೂರರ ಬದುಕಿನಲ್ಲಿ ಕಠಿಣ ಪರಿಸ್ಥಿತಿಗಳೇ ಅಧಿಕ. ಪ್ರೀತಿಯ ಅಣ್ಣ ಬಸವರಾಜರು 1976ರಲ್ಲಿ ಹಾಗೂ ನೆಚ್ಚಿನ ಮಡದಿ ಗಂಗಮ್ಮ 1985ರಲ್ಲಿ ನಿಧನರಾದಾಗ ಅವರು ನಿಂತ ನೆಲೆ ಅಲ್ಲಾಡತೊಡಗಿತು. ದೈವ ಅವರ ಬಗ್ಗೆ ಮುನಿದಿದೆ ಎನ್ನಿಸಿದಾಗ ಇಂಥ ಅಸದಳ ಭಕ್ತ ಅದಕ್ಕೇನೆನ್ನು ತಿರುಗಿಸಿದ್ದೂ ಉಂಟು. ಉದಾಹರಣೆಗೆ ಶ್ರೀಶೈಲ ಯಾತ್ರೆಗೆಂದು ತಾಯಿ, ಬಂಧು ಬಳಗದವರೊಡನೆ ಹೊರಟಿದ್ದ ಇತರ ಹಣ, ಬಟ್ಟೆ, ಎಲ್ಲವೂ ಕಳುವಾಗಿ, ಹಿಂದಿನ ರಾತ್ರಿ ತಾನೇ ದೇವಾಲಯದ ಮುಚ್ಚಿದ ಬಾಗಿಲ ಮುಂದೆ ನಿಂತು "ಮಲ್ಲಿಕಾರ್ಜುನಾ ನನ್ನನ್ನು ಕರೆದುಕೊಳ್ಳಪ್ಪಾ" ಎಂದು ನೂರು ಸಲ ಬೇಡಿದ್ದೆ, ತಾಯಿ ನೀಲಮ್ಮ ಮರುದಿನವೇ ಮುಂಜಾವಿನಲ್ಲಿ ಚಕ್ಕಡಿಯೊಂದಕ್ಕೆ ಸಿಕ್ಕಿ ಅಸು ನೀಗಿದಾಗ ಮಲ್ಲಿಕಾರ್ಜುನನ ಮುಖವನ್ನೇ ಮತ್ತೊಮ್ಮೆ ನೋಡುವುದಿಲ್ಲ ಎಂದು ಪ್ರತಿಜ್ಞೆತೊಡುತ್ತಾರೆ. ಅವರು ಮತ್ತೆ ಆ ಸ್ಥಳವನ್ನು ಸಂದರ್ಶಿಸಿದ್ದು 32 ವರ್ಷಗಳನಂತರ. ಆದರೆ ಮಾತಿಗೆ ತಲೆಬಾಗಿದ್ದುಂಟು. ಉದಾಹರಣೆಗೆ ಮಗ ಬಸವರಾಜರು ಅಂತ ರ್ಜಾತೀಯ ವಿವಾಹ ಮಾಡಿ ಕೊಂಡಾಗ ಅದನ್ನು ಇವರಿಗೆ ಸಹಿಸಲಾಗುವುದಿಲ್ಲ. ತಮ್ಮ ಕುಲಕ್ಕೆ ಯಾವುದೋ ಧಕ್ಕೆಯುಂಟಾಯಿತು ಎಂದು ಭಾವಿಸುತ್ತಾರೆ. ಆತನನ್ನು ಮನೆಯಿಂದ ಹೊರ ಹಾಕುತ್ತಾರೆ. ಆದರೆ ಒಮ್ಮೆ ಬಸವರಾಜರು



ರೇಡಿಯೋದಲ್ಲಿ ತಮ್ಮ ತಂದೆಯವರ ಸಂಗೀತ ವನ್ನು ಆಲಿಸಿ ಬಾವೆ ಅವರು ತಮಗೆ ತೋರಿದ್ದ ಅಕ್ಕರೆಯನ್ನು ನೆನೆದು ಅಳುತ್ತಾ ಊಟ ನಿದ್ರೆ ಬಿಟ್ಟು ಕುಳಿತು ಬಿಡುತ್ತಾರೆ. ವಿಷಯ ವನ್ನು ತಿಳಿದ ಮಠದ ಸ್ವಾಮಿಗಳೊಬ್ಬರು



ಈ ಸಂಗತಿಯನ್ನು ತಿಳಿದು ತಂದೆ – ಮಗನ ಮಧ್ಯೆ ಮಧ್ಯಸ್ತಿಕೆ ಮಾಡಲು ಮುಂದಾಗಿ. ಮಗನಿಂದ ತಪ್ಪಾಗಿದೆ ಯೆಂದು ಭಾವಿಸಿದ ಮನಸೂರರನ್ನು ಕರೆಸಿ ಅವರಿಗೆ ಹಿತ ವಚನ ಹೇಳಿದಾಗ ಮನಸೂರರು ಮತ್ತೆ ದೂರವಾಗಿದ್ದ ಮಗ ನನ್ನು ತಮ್ಮ ತೆಕ್ಕೆಗೆ ಬರಮಾಡಿಕೊಳ್ಳುತ್ತಾರೆ.

## ಗಂಧರ್ವ ಗಾಯಕನ ಅಸ್ತಮಾನ

ಮಲ್ಲಿಕಾರ್ಜುನ ಮನರೂರರು ಸೆಪ್ಟಂಬರ್ 12, 1992 ರಂದು ನಿಧನರಾದದ್ದು ಪುಪ್ಪಸದ ಅರ್ಬುದದಿಂದಾಗಿ, ಆದರೆ ಅದಕ್ಕೂ ಮೊದಲು ಅವರು ಮೂತ್ರಪಿಂಡದ ಕಾಯಿಲೆಯಿಂದ ನರಳಿದ್ದರು. ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಯಲ್ಲಿದ್ದಾಗ ಅವರ ಚಿಕಿತ್ಸೆ ನಡೆಸಿದ ಡಾ॥ ತಳವಲಕೆರ ಎಂಬವರು: "ಪಂಡಿತ್ ಜೀ, ನೀವೀಗ ಗುಣವಾಗಿದ್ದೀರಿ. ಮನೆಗೆ ಹೋಗಬಹುದು" ಎಂದಾಗ ಅದನ್ನು ಖಾತರಿ ಪಡಿಸಿಕೊಳ್ಳಲು ಮನಸೂರರು ಹಿಡಿದ ಮಾರ್ಗ, ತಂಬೂರಿಯನ್ನು ವಾರ್ಡಿಗೇ ತರಿಸಿ

ಅದನ್ನು ಶ್ರುತಿ ಮಾಡಿ, ಷಡ್ಜಹಚ್ಚಿ ಹಾಡಿದ್ದು. ಆಸ್ಪತ್ರೆಯಲ್ಲಿ ಅರೆಪ್ರಜ್ಞಾವಸ್ಥೆಯಲ್ಲಿದ್ದಾಗಲೂ ಮಗ ರಾಜಶೇಖರನಿಂದ ಹಾಡಿಸಿ ಸೂಕ್ತ ಸಲಹೆ ಗಳನ್ನು ನೀಡಿದಂಥ ಸಂಗೀತ ಭಕ್ತ ಮನ್ಸೂರರು. ಮನಸ್ಥೈರ್ಯ ವನ್ನು ಸಂಗೀತದೊಂದಿಗೆ ಮೇಳೈಸಿದ ಇವರನ್ನು ಕಂಡ ಡಾ॥ ತಳವಲಕೆರೆ ಅಂದು ಉದ್ಗರಿಸಿದ್ದನ್ನು ಮನಸೂರರ ಸವಿರೂಪದಲ್ಲಿ ಇಂದೂ ಮೆಲುಕು ಹಾಕುತ್ತಾರೆ. "ಈ ಮಹಾನುಭಾವನ ರಕ್ತದಲ್ಲಿ ಸಂಗೀತವಿರುವುದು ಅಕ್ಷರಶಃ ನಿಜ. ಅವರಿಗೆ ಸಂಗೀತಕ್ಕಾಗಿ ಬದುಕಬೇಕೆಂಬ ಛಲ ಇಲ್ಲದೆ ಹೋಗಿದ್ದರೆ ನಾವು ಡಾಕ್ಟರರು ಏನು ಮಾಡಿದರೂ ಅವರು ಗುಣ ಹೊಂದುತ್ತಿರಲ್ಲಿಲ್ಲ." ಸ್ವಲ್ಪ ಕಾಲಾನಂತರ ಮನಸೂರರು ಆಸ್ಪತ್ರೆಯ ಸಹಾಯಾರ್ಥ ನಿಧಿಗಾಗಿ ಅಮೋಘವಾಗಿ ಆರೋಗ್ಯವಂತರಂತೆ ಕಚೇರಿ ನೀಡಿದ್ದರು.

## ಪ್ರಶಂಸೆ, ಪ್ರಶಸ್ತಿ, ಪುರಸ್ಕಾರಗಳು

"ಪ್ರಶಂಸೆಯ ನಿರೀಕ್ಷೆಯಿಂದ ಕೋಗಿಲೆ ಹಾಡುತ್ತದೆಯೇ?" ಮಲ್ಲಿಕಾರ್ಜುನ ಮನಸೂರರು ಒಮ್ಮೆ ಪ್ರಶ್ನಿಸಿದ್ದರು. ಅವರು ಅದಕ್ಕಾಗಿ ಹಂಬಲಿಸಲಿಲ್ಲ. ಅವು ತಾವಾಗಿಯೇ ಬಂದವು - ರಸಿಕರ ಪ್ರಶಸ್ತಿಗಳು, ರಾಜ್ಯ ಪುರಸ್ಕಾರಗಳು, ರಾಷ್ಟ್ರೀಯ ಮನ್ನಣೆಗಳು, ಗದಗಿನ ರಸಿಕರು ಇವರನ್ನು "ಸಂಗೀತರತ್ನ"ರೆಂದು ಕರೆದರು. ಅಥಣಿಯ ಸಮಾರಂಭದಲ್ಲಿ "ಗಂಧರ್ವರತ್ನ" ಎಂದು ಕೊಂಡಾಡಿದರು. 1962ರಲ್ಲಿ ಕರ್ನಾಟಕ ರಾಜ್ಯ ಸಂಗೀತದ ನೃತ್ಯ ಅಕಾಡೆಮಿ ಪ್ರಶಸ್ತಿ ನೀಡಿತು. 1968ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಲಭ್ಯವಾಯಿತು. 1970ರಲ್ಲಿ ಭಾರತ ಸರ್ಕಾರ "ಪದ್ಮಶ್ರೀ" ನೀಡಿ ಗೌರವಿಸಿತು. 1972ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ, ಪ್ರಶಸ್ತಿ ನೀಡಿತು. 1976ರಲ್ಲಿ ಇವರು "ಪದ್ಮಭೂಷಣ"ಕ್ಕೆ ಆಯ್ಕೆಯಾದರು.

1975ರಲ್ಲಿ ಇವರಿಗೆ ಗೌರವ ಡಾಕ್ಟರೇಟ್ ಇತ್ತ ಕರ್ನಾಟಕ ವಿಶ್ವವಿದ್ಯಾಲಯ 1976ರಲ್ಲಿ ಸಂಗೀತದ ಸ್ನಾತಕೋತ್ತರ ವಿಭಾಗಕ್ಕೆ ಪ್ರಥಮ ಗೌರವ ನಿರ್ದೇಶಕರನ್ನಾಗಿ ಇವರನ್ನು ನೇಮಿಸಿತು. ಈ ಹಂತದಲ್ಲಿ ಮನಸೂರರು ಸಂಗೀತ ಸಿದ್ಧಾಂತ, ಸಂಗೀತ ಇತಿಹಾಸ ಇವುಗಳ ಅಧ್ಯಯನಕ್ಕೆ ವಿಶ್ವವಿದ್ಯಾಲಯದಲ್ಲಿ ಅವಕಾಶ ಮಾಡಿಕೊಟ್ಟರು. ಇವರ ಅಧಿಕಾರಾವಧಿಯಲ್ಲಿ ಪಠ್ಯಕ್ರಮ ಮತ್ತು ಪರೀಕ್ಷಾ ವಿಧಾನಗಳು, ಸಂಗೀತ ವಿಭಾಗಕ್ಕೆ ಸಂಬಂಧಿಸಿದಂತೆ, ರೂಪಿಸಲ್ಪಟ್ಟವು. ವಿಶ್ವವಿದ್ಯಾಲಯ "ಸಂಗೀತ ರತ್ನ" ಎಂಬ ಸಂಭಾವನ ಗ್ರಂಥವನ್ನು ಇವರ 60ನೇ ಹುಟ್ಟುಹಬ್ಬದ ನೆನಪಿಗಾಗಿ ಹೊರ ತಂದಿತು. 1981ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರೊಫೆಸರ್ ಎಮೆರಿಟಸ್ ಎನ್ನಿಸಿಕೊಂಡ ಮಲ್ಲಿಕಾರ್ಜುನರನ್ನು 1988ರಲ್ಲಿ ವಿಶ್ವಭಾರತಿ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿ "ದೇಶಿಕೋತ್ತಮ" ಎಂದು ಕರೆಯಿತು. 1981ರಲ್ಲಿ ಮುಂಬಯಿಯ ನ್ಯಾಷನಲ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್ ಹಾಗೂ ಕರ್ನಾಟಕ ವಿಶ್ವವಿದ್ಯಾಲಯಗಳು ಇವರನ್ನು ಸತ್ಕರಿಸಿದ್ದವು.

ಸರೋದ ಪ್ರಭೃತಿ ಹಾಫಿಜ ಆಲಿಖಾನರ ಸ್ಮರಣಾರ್ಥ ಶ್ರೇಷ್ಠ ಗಾಯಕರಿಗೆ ನೀಡುವ ಪ್ರಶಸ್ತಿ – ಹಾಫಿಜ ಆಲಿಖಾನ ಪುರಸ್ಕಾರವನ್ನು ಮಲ್ಲಿಕಾರ್ಜುನರು 1991ರಲ್ಲಿ ಪಡೆದುಕೊಂಡರು. 1992ರಲ್ಲಿ 'ಪದ್ಮ ವಿಭೂಷಣ'ರಾದರು.

ರಸಿಕ ವೃಂದದಿಂದ ದೊರೆತ ಪ್ರಶಸ್ತಿ ಪ್ರಶಂಸೆಗಳೆಲ್ಲವೂ ಏಕ ರೀತಿಯಾಗಿ ಗಾಯಕನೊಬ್ಬನಿಗೆ ಸಂದ ಮನ್ನಣೆ ಮೊದಲ ಜುಲೈ 21, 1981 ರಂದು ಮಲ್ಲಿಕಾರ್ಜುನ ಮನ್ಸೂರರು ಅಂದಿನ ಪ್ರಧಾನಿ ಇಂದಿರಾಗಾಂಧಿಯವರಿಂದ ಕಾಳಿದಾಸ ಸಮ್ಮಾನ ಪ್ರಶಸ್ತಿ ತಾಮ್ರಪಟವನ್ನು ಸ್ವೀಕರಿಸಿದ್ದು ಕನ್ನಡಿಗರಿಗೆ,



ಗಾಯನ ಜಗತ್ತಿಗೆ ಅಸಾಧಾರಣ ಹರ್ಷ ಹೆಮ್ಮೆಯನ್ನು ತಂದುಕೊಟ್ಟವು.

## ಬರಹಗಾರರಾಗಿ ಮನಸೂರರು

ಪಂಡಿತ ಮಲ್ಲಿಕಾರ್ಜುನ ಮನ್ಸೂರರ ಅಭಿಮಾನಿ ಬಳಗ ಅಗಾಧವಾಗಿದೆ ಎಂದ ಮೇಲೆ ಅವರನ್ನು ಕುರಿತಂತೆ ಪ್ರಕಟವಾಗಿರುವ ಲೇಖನಗಳು ಅನೇಕ. ಹಲವು ಪುಸ್ತಕಗಳೂ ಅವರ ಹಿರಿಮೆಯನ್ನು ಪರಿಚಯಿಸಿಕೊಂಡುವಂಥವು. ಆದರೆ ಮಲ್ಲಿಕಾರ್ಜುನ ಮನಸೂರರೇ ತಾವು ಸಂದ ಹಾದಿಯತ್ತ ಹಿನ್ನೋಟ ನೀಡಿ ಘಟನೆಗಳನ್ನು, ತಮ್ಮ ಮನಮುಟ್ಟಿದ ಸಂಗತಿಗಳನ್ನು, ಏರು ಬೆಳಕಿಗೆ ತಮ್ಮನ್ನು ಒಪ್ಪಿಕೊಳ್ಳುವುದಕ್ಕೂ ಮೊದಲು ಜೀವನದಲ್ಲಿ ಎದುರಿಸಿದ ಕತ್ತಲಿನ ಸಂದರ್ಭಗಳನ್ನು ತಮ್ಮ ಆತ್ಮಕಥನ "ನನ್ನ ರಸಯಾತ್ರೆ"ಯಲ್ಲಿ ವಿವರಿಸಿರುವುದು ಅನನ್ಯ ರೀತಿಯಲ್ಲಿ. "ನನ್ನ ರಸಯಾತ್ರೆ" ಮಲ್ಲಿಕಾರ್ಜುನರ ಉತ್ತಮ ನಿರೂಪಣ ಶಕ್ತಿಗೆ, ಸೃಜನ ಶೀಲ

ಬದುಕಿಗೆ, ಅದರ ಜೀವನ ದೃಷ್ಟಿಗೆ ಕೈಗನ್ನಡಿ. 1985ರಲ್ಲಿ ಪ್ರಕಟವಾದ ಈ ಮಹತ್ತರ ಗ್ರಂಥ ಕನ್ನಡಿಗರನ್ನು ಮಿಡಿಯಬಲ್ಲ ಗ್ರಂಥ.

ಮನಸೂರರು ತಮ್ಮ ಸುದೀರ್ಘ ಬದುಕಿನಲ್ಲಿ ರೇಡಿಯೋ ಹಾಗೂ ಇತರ ಮಾಧ್ಯಮಗಳ ಮೂಲಕ ನೀಡಲಾಗಿರುವ ಸಂದರ್ಶನಗಳಲ್ಲಿ ತಮ್ಮ ವ್ಯಕ್ತಿತ್ವದ, ಸಾಧನೆಯ ವಿವಿಧ ಮುಖಗಳನ್ನು ಸತ್ತ್ವಶಾಲಿಯಾಗಿ ಹಿಡಿದಿಡುತ್ತಾರೆ. ಮಲ್ಲಿಕಾರ್ಜುನ ಮನಸೂರರ ಅಪ್ರತಿಮ ಬದುಕು - ಸಂಗೀತ - ಸಾಧನೆಗಳನ್ನು ಅವರ ಮಾತುಗಳ ಮೂಲಕವೇ ಮತ್ತಷ್ಟು ಹಿಡಿದಿಡಲು ಅನುಕಾಲವಾಗುವಂತೆ ಆಯ್ದ ಕೆಲವನ್ನು ಇಲ್ಲಿ ನೀಡಲಾಗಿದೆ.

"ಸಿದ್ಧಿ ಪಡೆದ ಸಂಗೀತಗಾರನು ಸಂಗೀತವನ್ನು ಲಿತ್ರೊಡ್ಯೂಸ್ ಮಾಡುವುದಿಲ್ಲ;"

ತ್ರೂಕ್ಯೂಸ್ ಮಾಡುತ್ತಾನೆ. ಇದಕ್ಕೆ ಹೃದಯದ ಸಂಸ್ಕಾರ, ಸಂಪತ್ತು ಬೇಕು."

"ಸಂಗೀತದೊಳಗೆ ಒಬ್ಬನ ಮನಸ್ಸು ಕರಗಿಸಿ, ಅಂತಃಕರಣ ಹೊರಸೂಸಿ ಹೃದಯ ಪರಿವರ್ತನ ಅಗೋಹಂಗ ಮಾಡುವ ಶಕ್ತಿ ಅದ."

"ಆಧುನಿಕ ಕಾಲದಲ್ಲಿ ಸಂಗೀತ ಕಲೆಯ ಬೆಳವಣಿಗೆಯ ಬಗೆಗೆ ಅನೇಕ ಪ್ರಯತ್ನಗಳು ನಡೆದು, ಇಂದು ಶಾಸ್ತ್ರೀಯ ಸಂಗೀತವು ಮನೆ ಮನೆಯ ಮಾತಾಗಿದೆ. ಸಂಗೀತ ಕಲೆಯ ಈ ರೀತಿಯ ಜನಪ್ರಿಯತೆ ಮತ್ತು ಬೆಳವಣಿಗೆಗಳನ್ನು ಕಂಡರೆ, ಒಂದು ದೃಷ್ಟಿಯಿಂದ ಆನಂದವೆನ್ನಿಸಿದರೂ ಇಂದಿನ ಸಂಗೀತದ ಕಲೆಯಲ್ಲಿನ ಸತ್ಯಹೀನತೆಯನ್ನು ಕಂಡರೆ ವಿಷಾದವೆನಿಸುತ್ತದೆ. ಸಂಗೀತದ ಪರಂಪರಾಗತ ಶಿಕ್ಷಣದ "ಗುರು-ಶಿಷ್ಯ" ಪದ್ಧತಿಯು ಬಿದ್ದು ಹೋಗಿ ಹಣ ಕೊಟ್ಟು ಕಲಿಯುವ, ಕಲಿಸುವ ಪದ್ಧತಿಯಿಂದ ಕಲಿಸುವುವರ ಮತ್ತ ಕಲಿಯುವವರ ನಡುವಿನ "ಮಧುರ

ಬಾಂಧವ್ಯ"ಕ್ಕೆ ಕೊಡಲಿ ಏಟು ಬಿದ್ದು ಸಂಗೀತ ಶಿಕ್ಷಣವು ಇಂದು ಒಂದು ಶುಷ್ಕ ವ್ಯವಹಾರವಾದಂತಾಗಿದೆ."

"ಸಂಗೀತ ಶಿಕ್ಷಣವು ಯಾವುದೇ ಬಗೆಯ ಶುಷ್ಕವಾದ ಕಟ್ಟು ನಿಟ್ಟುಗಳಿಂದ ಮುಕ್ತವಾಗಿರಬೇಕು. ಮತ್ತು ಸಂಗೀತ ಶಿಕ್ಷಣಕ್ಕೆ ಕೇವಲ ಯೋಗ್ಯವಾದ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶವಿರಬೇಕು. ವಿದ್ಯಾರ್ಥಿಯು ತನ್ನ ಶಿಕ್ಷಣಾವಧಿ ಮುಗಿಯುವದರೊಳಗಾಗಿ ತರುಣ ಕಲಾವಿದನಾಗಿ ಹೊರಬೀಳಬೇಕು. ಈ ದೃಷ್ಟಿಯಿಂದ ನಮ್ಮ ಶಿಕ್ಷಣಾಕ್ರಮದಲ್ಲಿ ಅಗತ್ಯವಾದ ಬದಲಾವಣೆಗಳನ್ನು ತಂದುಕೊಳ್ಳಬೇಕು ಮತ್ತು ನುರಿತ ಅನುಭವಿಕ ಸಂಗೀತಜ್ಞರನ್ನು ಶಿಕ್ಷಕರನ್ನಾಗಿ ನೇಮಿಸಿಕೊಳ್ಳಬೇಕು. ಹೆಸರಾಂತ ಕಲಾವಿದರನ್ನು ಆದರಿಸಿ ಅವರಿಗೆ ಸಕಲ ಸಹಾಯ ಸೌಕರ್ಯಗಳನ್ನು ಒದಗಿಸಿಕೊಟ್ಟು ಅವರ ಸಮರ್ಥ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳ ಸಂಗೀತ ಶಿಕ್ಷಣ ನಡೆಸಬೇಕು. ಅಂದರೆ ಮಾತ್ರ ನಮ್ಮ ಪರಂಪರಾಗತ ಶಿಕ್ಷಣ ಸತ್ವಶಾಲಿ, ಪ್ರಭಾವ ಪೂರ್ಣ ಸಂಗೀತ ಕಲೆ ಉಳಿದು ಬೆಳೆದುಕೊಂಡು ಬಂದೀತು."

## ಗಾಯನ ಗೋಷ್ಠಿಯಲ್ಲಿ ಮಲ್ಲಿಕಾರ್ಜುನ ಮನಸೂರ

"ತರುಣ ಸಂಗೀತಗಾರರಿಗೆ ಇನ್ನೂ ಹೆಚ್ಚು ಕಲೀಬೇಕು ಅನ್ನೋ ಮನೋವೃತ್ತಿ ಬೆಳೀಬೇಕು. ಹೆಸರಾಯ್ತು, ದುಡ್ಡಾಯ್ತು ಇದರಲ್ಲೆ ಮಗ್ನರಾಗಿ ಬಿಟ್ಟರೆ ಸಾಲದು. ಈವತ್ತು ಹೆಸರಿರೋವಂಥ ಸಂಗೀತಗಾರರು ಹೆಚ್ಚಿಗೆ ಯಾರಲ್ಲಿ ಜ್ಞಾನವಿದೆ, ವಿದ್ಯೆ ಇದೆ ಅವರಲ್ಲಿ ಹೋಗಿ ಕಲೀಬೇಕು. ಶಿಷ್ಯರಾಗ ಬೇಕು. ದುರಭಿಮಾನ ಬಿಡಬೇಕು ಅಂದರೆ ಸಂಗೀತ ಉಳಿಸೋ ಶ್ರೇಯಸ್ಸು ಅವರಿಗೆ ಬಂದೀತು. ಸುಮ್ಮನೆ ಚಪ್ಪಾಳೆ ಹೊಡೀತಾರೆ, ಹಾಡಿದಷ್ಟಕ್ಕೆ ವಾಹವಾಹ ಅನ್ನೋತಾ ಕೂತಾರೆ. ಸಂಗೀತ ಉಳಿಯೋ ಲಕ್ಷಣ ನನಗೇನೂ ಕಾಣಿಸುವುದಿಲ್ಲ. ಈಗ ಸಂಗೀತದ್ದು ಅವಲಕ್ಷಣಾನೇ ಕಾಣಿಸಲಿಕ್ಕೆ ಹತ್ತಿದೆ. ಒಳ್ಳೇ ಲಕ್ಷಣವಿನ್ನೂ ಕಾಣಿಸ್ತಿಲ್ಲ."

"ಸಂಗೀತಕ್ಕೆ ಒಂದು ಸ್ಥಾನಮಾನ ಇದೆ. ಒಂದು ವಿಶಿಷ್ಟವಾದ ಪದ್ಧತಿ ಇದೆ. ಗೌರವವಾದ ಸಂಗೀತ ಇದೆ. ಸಂಗೀತ ಕೇಳೋದರಿಂದ ದೇವರ ಕಡೆ ಭಕ್ತಿ ಹುಟ್ಟೋ ಅಂಥ ಸಂಗೀತ ಉಚ್ಚ ಮಟ್ಟದ್ದು. ಯಾರ ಸಂಗೀತ ಕೇಳೋದರಿಂದ ನಮ್ಮ ಮನಸ್ಸು ಚಂಚಲ ಆಗಿ ನಮ್ಮ ಪ್ರವೃತ್ತಿ ಕೆಡ್ತದೋ, ಅದು ಸಣ್ಣ ತರಗತಿಯ, ಕೆಳಗಿನ ತರಗತಿಯ ಸಂಗೀತ ಅಂತ ನನ್ನ ಅಭಿಪ್ರಾಯ. ಅಂಥ ಉಚ್ಚಮಟ್ಟದ ಸಂಗೀತ ಉಳಿಸಿಕೊಳ್ಳೋದಕ್ಕೆ ಇಂದಿನ ಜನರೇಷನ್, ಈಗಿನ ತರುಣರು ಪ್ರಯತ್ನ ಮಾಡಿಲ್ಲ."

"ಜೀವನದಲ್ಲಿ ಕಷ್ಟಗಳಿವೆ. ಆದರೆ ಸಂಗೀತದಲ್ಲಿ ಆನಂದವಿದೆ. ಆದಕಾರಣ ನಾನು ಸದಾ ಸಂಗೀತದಲ್ಲೇ ಬಾಳುತ್ತೇನೆ."

"ಸಂಗೀತ ಕಲೆ ಒಂದು ಸಾಗರವಿದ್ದಂತೆ, ಅದರ ಆಳ ನನಗೆ ತಿಳಿದಿಲ್ಲ. ನಾನು ಆ ಸಾಗರದ ಹನಿ ಮಾತ್ರ."

ಸಾಹಿತ್ಯ ಸಾಮಾಗ್ರಿಗಳು :

1. ನನ್ನ ರಸಯಾತ್ರೆ – ಸಂ. ಮಲ್ಲಿಕಾರ್ಜುನ ಮನ್ಸೂರ.
2. ಸಂಗೀತ ರತ್ನ – ಸಂ. ಪ್ರೊ. ಸ. ಸ. ಮಾಳವಾಡ
3. ಮಲ್ಲಿಕಾರ್ಜುನ ಮನ್ಸೂರ – ಸದಾನಂದ ಕನವಳ್ಳಿ.
4. ರಾಜಗುರು ಸ್ಮೃತಿ – ಪ್ರಥಮ ವಾರ್ಷಿಕೋತ್ಸವ ಸ್ಮರಣ ಸಂಚಿಕೆ 1992.



ಬಿ.ಎಸ್.ವೆಂಕಟಲಕ್ಷ್ಮಿಯವರು ಸಂಗೀತ, ನೃತ್ಯ, ಯಕ್ಷಗಾನ ಮುಂತಾದ ಕಲೆಗಳಲ್ಲಿ ಅಪಾರವಾದ ಆಸಕ್ತಿ ಹೊಂದಿದ್ದರು. ಓದು ಮತ್ತು ಬರಹ ಅವರ ಪ್ರಮುಖ ಹವ್ಯಾಸವಾಗಿತ್ತು. ಪತ್ರಿಕೋದ್ಯಮದಲ್ಲಿಯೂ ಅವರು ತಮ್ಮ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ಲೇಖಕಿಯರ ನೆಲೆ-ಬೆಲೆ, ಮತ್ತು ಬದುಕು ಭರವಸೆ ಬವಣೆ ಇವು ಇವರ ಪ್ರಮುಖ ಕೃತಿಗಳಾಗಿವೆ. ಇವರು ಬರೆದ "ಸಂಗೀತ ಸಾಮ್ರಾಟ ಮಲ್ಲಿಕಾರ್ಜುನ ಮನಸೂರ" ಗಾತ್ರದಲ್ಲಿ ಕಿರಿದಾಗಿದ್ದರೂ ತುಂಬ ಮನೋಜ್ಞವಾಗಿದೆ.

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-560 002.